# ನೇಸರು

## ತಿಂಗಳೋಲೆ

₹ 5/-

PAGES 20

JUNE 2026 | Nesaru Tingalole | Vol. XLIV - 06



## ಪರಿಸರ ಸಂರಕ್ಷಣೆ ನಮ್ಮ ಕರ್ತವ್ಯ

**ಮೈಸೂರು ಅಸೋಸಿಯೇಷನ್ ಮುಂಬೈ**

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಸೃಜನಾ ಮುಂಬಯಿ ಕನ್ನಡ ಲೇಖಕಿಯರ ಬಳಗ ಆಯೋಜಿತ ಸಾಹಿತ್ಯ ಸಂವಾದ ಕಾರ್ಯಕ್ರಮ

## ಸಮಸ್ಯೆಗಳೆಂಬುದಿಲ್ಲ. ಇರುವುದೆಲ್ಲ ಸವಾಲುಗಳು ಮಾತ್ರ: ನೇಮಿಚಂದ್ರ

**ಶಿಕ್ಷಣದಲ್ಲಿ ಹೆಚ್ಚಿನ ಅಂಕಗಳು:** ಅಂಕಗಳು ಹೆಚ್ಚಿನ ದೊರೆಯಲಿಲ್ಲ ಎನ್ನುವ ಕಾರಣಕ್ಕಾಗಿ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಘೋರ ದುರಂತವಾಗಿದೆ. ದೇಶದ ಭವಿಷ್ಯದ ಪ್ರಜೆಗಳಿಗೆ ಅಂಕಗಳಷ್ಟೇ ಮುಖ್ಯವೇ? ಮಕ್ಕಳನ್ನು ಇಂದಿನ ಅಂಕಗಳ ರೇಸಿನ ಕುದುರೆಗಳಾಗಿ ಬೆಳೆಸುವುದು ದೊಡ್ಡ ಆತಂಕವಾಗಿದೆ. ಮನುಜರಲ್ಲಿ ಸಮಸ್ಯೆಗಳೆಂಬುದಿಲ್ಲ ಇರುವುದೆಲ್ಲ ಸವಾಲುಗಳು ಮಾತ್ರ. ಆದ್ದರಿಂದ ಸಮಸ್ಯೆಗಳನ್ನು ಬಗೆಹರಿಸಲು ಪ್ರತಿಯೊಂದು ಸವಾಲುಗಳಿಗೆ ಉತ್ತರ ಹುಡುಕಿಕೊಳ್ಳುವಷ್ಟು ಬುದ್ದಿವಂತರು ನಾವಾಗಬೇಕು. ಆ ಮೂಲಕ ಬದುಕು ನಮಗೆ ಹೊಸ ಜೀವನವನ್ನು ಕಲಿಸುವುದು ಎಂದು ಬರಹಗಾರ್ತಿ ನೇಮಿಚಂದ್ರ ಮಲ್ಹೋತ್ರತ್ರ ತಿಳಿಸಿದರು.



ಮೈಸೂರು ಅಸೋಸಿಯೇಶನ್ ಮುಂಬಯಿ ಸಹಯೋಗದೊಂದಿಗೆ ಕನ್ನಡ ಲೇಖಕಿ ಯರ ಬಳಗ ಮುಂಬಯಿ 'ಸೃಜನಾ ಕನ್ನಡ ಲೇಖಕಿಯರ ಬಳಗದ ವತಿಯಿಂದ 16/05/2025 ಶನಿವಾರ ಸಂಜೆ ಮಾಟುಂಗಾ ಪೂರ್ವದ ಮೈಸೂರು ಅಸೋಸಿಯೇಶನ್ ಕಿರು ಸಭಾಗೃಹದಲ್ಲಿ ಆಯೋಜಿಸಿದ ಸಾಹಿತ್ಯ ಸಂವಾದ ಕಾರ್ಯಕ್ರಮವನ್ನುದ್ದೇಶಿಸಿ ವಿಜ್ಞಾನ, ಮಹಿಳಾ ಸಂವೇದನೆ, ಪ್ರವಾಸ ಕಥನ, ಸಣ್ಣಕತೆ, ಕಾದಂಬರಿ ಹಾಗೂ ವಿಚಾರಪೂರ್ಣ ಲೇಖನಗಳ ಮೂಲಕ ಬದುಕು ಬದಲಿಸುವಂತಹ ಸಕಾರಾತ್ಮಕ ಅಂಕಣಕರ್ತೆ, ಬರಹಗಳ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ ನೇಮಿಚಂದ್ರ ಅವರು ಸೃಜನಾ ಸದಸ್ಯರೊಂದಿಗೆ ಸಾಹಿತ್ಯಕ ವಿಚಾರ, ವಿಷಯಗಳನ್ನು ಹಂಚಿಕೊಂಡು ಹಲವಾರು ವಿಷಯಗಳ ಬಗ್ಗೆ ಮಾಹಿತಿಯನ್ನಿತ್ತರು.



ಸೃಜನಾ ಸಂಚಾಲಕಿ ಪದ್ಮಜಾ ಮಣ್ಣೂರ್, ಕಾರ್ಯದರ್ಶಿ ಲತಾ ಸಂತೋಷ್ ಶೆಟ್ಟಿ ಮುದ್ದುಮನೆ, ಕೋಶಾಧಿಕಾರಿ ಡಾ. ದಾಕ್ಷಾಯಣಿ ಯಡಹಳ್ಳಿ, ಹಿರಿಯ ಸದಸ್ಯೆ ಶ್ಯಾಮಲಾ ಮಾಧವ್ ವೇದಿಕೆಯಲ್ಲಿದ್ದು, ಸಂವಾದದಲ್ಲಿ ಪತ್ರಕರ್ತೆ ಸಿ.ಜಿ ಮಂಜುಳಾ ಪಾಲ್ಗೊಂಡು ಸಾಹಿತ್ಯ ಕ್ಷೇತ್ರದ ತನ್ನ ಅನುಭವಗಳನ್ನು ಹಂಚಿಕೊಂಡರು.

ಸೃಜನಾ ಮಾಜಿ ಸಂಚಾಲಕಿ ಶಾರದಾ ಅಂಬೇಸಂಗೆ ಮತ್ತಿತರರು ಉಪಸ್ಥಿತರಿದ್ದು ಲಲಿತಾ ಅಂಗಡಿ ಪ್ರಭು ಪ್ರಾರ್ಥನೆಯನ್ನಾಡಿದರು.

ಹಿರಿಯ ಸದಸ್ಯೆ ಸುಮಾ ದ್ವಾರಕನಾಥ್ ಮತ್ತು ಸಂಚಾಲಕಿ ಡಾ. ಜಿ.ಪಿ. ಕುಸುಮಾ ಅತಿಥಿಗಳನ್ನು ಪರಿಚಯಿಸಿದರು. ಲತಾ ಸಂತೋಷ್ ಶೆಟ್ಟಿ ಸ್ವಾಗತಿಸಿ, ನಿರೂಪಿಸಿ ವಂದಿಸಿದರು.

'ನೇಸರು' ತಿಂಗಳೋಲೆ

ಸಂಪುಟ 44 ಜೂನ್ 2026 ಸಂಚಿಕೆ 06

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

# ದೇಹದಲ್ಲಿ ಪ್ರಾಣದ ಶ್ರೇಷ್ಠತೆ



**ಡಾ. ಜ್ಯೋತಿ ಸತೀಶ್**

'ಈ ಬದುಕಿನಲ್ಲಿ ನಮ್ಮ ಹೋರಾಟ ಎಲ್ಲಿಯ ತನಕ?' ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಂಡಾಗ, ಉತ್ತರ ಸಿಗೋದು, ನಮ್ಮ ಉಸಿರು ನಿಲ್ಲುವವರೆಗೆ. ಅಂದರೆ ಪ್ರಾಣವಾಯು ನಮ್ಮನ್ನು ಬಿಟ್ಟು ಹೋದರೆ, ನಮ್ಮ ಅಸ್ತಿತ್ವ ಅಲ್ಲಿಗೆ ಮುಗಿದ ಹಾಗೆ. ಅದಕ್ಕಾಗಿ ಉಪನಿಷತ್ತುಗಳಲ್ಲಿ ಪ್ರಾಣಕ್ಕೆ ಅತಿಯಾದ ಪ್ರಾಮುಖ್ಯತೆಯನ್ನು ಕೊಟ್ಟಿದ್ದು. ಪ್ರಾಣವು ಇತರ ಇಂದ್ರೀಯಗಳಿಗಿಂತ ಶ್ರೇಷ್ಠವಾದುದು. ಅದನ್ನು ನಮ್ಮ ಜೀವನದಲ್ಲಿ ಉಪಾಸನೆ ಮಾಡಬೇಕು. ಯಾರು ಪ್ರಾಣೋಪಾಸನೆಯನ್ನು ಮಾಡುತ್ತಾರೋಅವರಿಗೆ ಸಮಾಜದಲ್ಲಿ ಶ್ರೇಷ್ಠವಾದ ಸ್ಥಾನಮಾನಗಳು ಪ್ರಾಪ್ತವಾಗುತ್ತವೆ. ಈ ಪ್ರಾಣದ ಶ್ರೇಷ್ಠತೆಯನ್ನು ಮನಗಾಣಿಸುವುದಕ್ಕಾಗಿ ವೇದಗಳಲ್ಲಿ ಹಾಗೂ ಉಪನಿಷತ್ತಿನಲ್ಲಿ ಅನೇಕ ವ್ಯಾಖ್ಯಾನಗಳು ಬಂದಿವೆ.

ಈ ಸಂದರ್ಭದಲ್ಲಿ ಛಾಂದೋಗ್ಯೋಪನಿಷತ್‌ನಲ್ಲಿ ಬರುವ ಒಂದು ಕತೆ ನೆನಪಾಗುತ್ತದೆ. ವಿದ್ವಾನ್ ರಂಗನಾಥ ಶರ್ಮ ಅವರು ಇದನ್ನು ಕನ್ನಡಕ್ಕೆ ಬಹು ಸುಂದರವಾಗಿ ಅನುವಾದಿಸಿದ್ದಾರೆ. ಒಮ್ಮೆ ಪ್ರಾಣಕ್ಕೂ ಇತರ ಇಂದ್ರೀಯಗಳ ನಡುವೆ, 'ಯಾರು ಶ್ರೇಷ್ಟರು?' ಎಂಬ ವಿಷಯದಲ್ಲಿ ವಾಗ್ವಾದ ಹುಟ್ಟಿಕೊಂಡಿತು. ಪ್ರಾಣವು "ಈ ದೇಹದಲ್ಲಿ ನಾನೇ ಶ್ರೇಷ್ಠ. ಏಕೆಂದರೆ ನಾನು ಹಿರಿಯವನು. ನಾನು ಇಲ್ಲಿಗೆ ಬಂದ ಮೇಲೆ ನೀವೆಲ್ಲ ಇಲ್ಲಿಗೆ ಬಂದು ಸೇರಿಕೊಂಡಿದ್ದೀರಿ. ನಾನಿಲ್ಲದಿದ್ದರೆ ಈ ದೇಹ ವ್ಯಾಪಾರವೇನೂ ನಡೆಯುವುದಿಲ್ಲ" ಎಂದು ಹೇಳಿತು. ಆಗ ವಾಗಿಂದ್ರೀಯವು, "ವಯಸ್ಸಿನಲ್ಲಿ ಹಿರಿಯನಾದ ಮಾತ್ರಕ್ಕೆ ಶ್ರೇಷ್ಠತೆ ಬಂದು ಬಿಡುವುದಿಲ್ಲ. ನೀನು ಮಾಡುವ ಕೆಲಸವಾದರೂ ಏನು? ಸುಮ್ಮನೆ ಒಳಗೆ ಹೊರಗೆ ತಿರುಗಾಡಿಕೊಂಡು ಕಾಲಯಾಪನೆ ಮಾಡುತ್ತಿದ್ದೀಯೆ. ನನ್ನನ್ನು ನೋಡಿ ಕಲಿತುಕೊ, ನನ್ನ ವಾಕ್‌ಚಾತುರ್ಯದಿಂದ ಮನುಷ್ಯನಿಗೆ ವಿದ್ಯೆ, ಧನಲಾಭವಾಗುತ್ತಿದೆ. ಈ ದೇಹ ವ್ಯಾಪಾರ ನಡೆಯುತ್ತಿರುವುದೇ ನನ್ನಿಂದ. ಹಾಗಾಗಿ ನಾನೇ ಶ್ರೇಷ್ಠ"ಎಂದು ಹೇಳಿತು. ಆಗ ಚಕ್ಷುಂದ್ರಿಯವು, "ಮನುಷ್ಯನಿಗೆ ಕಣ್ಣಿಲ್ಲದಿದ್ದರೆ ಯಾವ ಕಾರ್ಯ ಮಾಡಲಾರನು. ನನ್ನ ಶ್ರೇಷ್ಠತೆಯನ್ನು ಗಮನಿಸಿಯೇ ನೀತಿ ಶಾಸ್ತ್ರಕಾರರು 'ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ'ಎಂದಿದ್ದಾರೆ. ಹಾಗಾಗಿ ನಿಮ್ಮ ಎಲ್ಲರಿಗಿಂತ ನಾನೇ ಮುಖ್ಯನಾದವನು". ಎಂದು ಹೇಳಿತು. ಆಗ ಒಡನೆಯೇ ಶ್ರೋತ್ರೇಂದ್ರಿಯವು ಎದ್ದು ನಿಂತು, "ಮನುಷ್ಯನಿಗೆ ಕಿವಿ ಕೇಳಿಸದೇ ಇದ್ದರೆ, ವಿದ್ಯೆಯೂ ಇಲ್ಲ, ಹಣವೂ ಇಲ್ಲ. ಗುರು ಹೇಳಿದ್ದು ಕೇಳದೇ ಇದ್ದರೆ, ಶಿಷ್ಯ ವಿದ್ಯಾವಂತನಾಗುವುದು ಹೇಗೆ? ನಾನಿಲ್ಲದಿದ್ದರೆ ಈ ದೇಹ ವ್ಯಾಪಾರ ನಿಂತು ಹೋಗುತ್ತದೆ". ಎಂದು ನುಡಿಯಿತು. ಅನಂತರ ಮನಸ್ಸು, ತನ್ನ ವಕಾಲತ್ತನ್ನು ವಹಿಸುತ್ತಾ, ಮನುಷ್ಯನಲ್ಲಿ ಬುದ್ಧಿ, ತಿಳುವಳಿಕೆ, ಜ್ಞಾನ ಎಂಬುದು ಮುಖ್ಯವಾದುದ್ದು. ಇದನ್ನು ಕೊಡತಕ್ಕವನು ನಾನು. ನನ್ನ ಆಜ್ಞೆಯನ್ನು ಪಾಲಿಸತಕ್ಕವರು ನೀವುಗಳು. ನಾನೇ ಈ ದೇಹದಲ್ಲಿ ಸರ್ವೋತ್ತಮನಾದವನು ಎಂದು ಅಬ್ಬರಿಸಿತು. ಹೀಗೆ ಎಲ್ಲ ಇಂದ್ರೀಯಗಳು ತಮ್ಮ ತಮ್ಮ ವಾದಗಳನ್ನು ಮುಂದಿಟ್ಟವು. ಯಾರು ಜಗ್ಗಲಿಲ್ಲ. ಅವರ ಜಗಳ ಬಗೆಹರಿಯಲಿಲ್ಲ. ಆಗ ಪ್ರಾಣದೇವತೆ ಒಂದು ನಿರ್ಣಯಕ್ಕೆ ಬಂದಿತು. 'ನಮ್ಮನ್ನು ನಿರ್ಮಿಸಿ ಈ ದೇಹದಲ್ಲಿ ಸೇರಿಸಿದವನು ಪ್ರಜಾಪತಿ ಬ್ರಹ್ಮ. ಆತನ ಬಳಿ ನೇರವಾಗಿ ಹೋಗಿ ಕೇಳೋಣ ನಮ್ಮಲ್ಲಿ ಯಾರು ಶ್ರೇಷ್ಠರೆಂದು?'. ಇದಕ್ಕೆ ಎಲ್ಲ ಇಂದ್ರೀಯಗಳು ತಮ್ಮ ಅಭಿಮತವನ್ನು ಸೂಚಿಸಿದವು.

(ಪುಟ 10ಕ್ಕೆ)

# ಪ್ರವಾಸ ವೈವಿಧ್ಯ

✍ ಡಾ. ಸುಮಾ ದ್ವಾರಕಾನಾಥ್



## ಲಾಸ್ ವೇಗಾಸ್

ಮುಂದಿನ ಪಯಣ, ಲಾಸ್ ವೇಗಾಸ್, ನೆವಾಡಾ. ಲಾಸ್ ಏಂಜಲೀಸ್ ನಿಂದ ಬಸ್‌ನಲ್ಲೇ ತಲುಪಿದೆವು. ಹೇಳಿ ಕೇಳಿ ಮನರಂಜನೆಯ ಮತ್ತು ಜೂಜಿನ ಪಟ್ಟಣ ಅದು. ಕಣ್ಣು ಕೋರೈಸುವ ದೀಪಗಳು, ಮುಗಿಲು ಮುಟ್ಟುವ ಕಟ್ಟಡಗಳು, ಆ ವೈಭವ ನಮ್ಮನ್ನು ಬೆರಗು ಗೊಳಿಸಿದ್ದೇನೋ ನಿಜ. ದಿನ, ರಾತ್ರಿ 24 ಗಂಟೆಯೂ ಸತತವಾಗಿ ಜೀವಂತವಾಗಿರುವ ಊರು. ಜಗತ್ತಿನ ಮನರಂಜನೆಯ ರಾಜಧಾನಿಯೆಂದು ಹೆಸರು ಪಡೆದ ಊರು. ವರ್ಷದಲ್ಲಿ ಸುಮಾರು 4 ಮಿಲಿಯನ್‌ಗೂ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಇದು ಮೊಜಾವೆ ಮರುಭೂಮಿಯಲ್ಲಿದೆ. ಇದನ್ನು 'ಪಾಪದ ಊರು' ಎಂದೂ ಕರೆಯುತ್ತಾರೆ.

ಇಲ್ಲಿ ಬೀದಿಯಲ್ಲಿ ಹೊರಟರೆ, ಬಗೆಬಗೆಯ ಕ್ಯಾಸಿನೊಗಳು ನಮ್ಮನ್ನು ಕೈಬೀಸಿ ಕರೆಯುತ್ತವೆ. ಎಫಿಲ್ ಟವರ್, ಟೈಟಾನಿಕ್, ಎಕ್ಸ್ ಕ್ಯಾಲಿಬರ್, ಎಂಪೈರ್ ಸ್ಟೇಟ್ ಬಿಲ್ಡಿಂಗ್, ಇವೆಲ್ಲವನ್ನೂ ನೋಡುತ್ತಾ ಹೋದ ಹಾಗೆ ಸಂಜೆ ಬೆಲಾಜಿಯೋ ಫೌಂಟೇನ್ ಶೋ ಶುರುವಾಗುತ್ತದೆ. ಮೆಲುವಾದ ಸಂಗೀತ ಕಾರಂಜಿಯಲ್ಲಿ ನೀರಿನ ಬಳುಕುವ ಕುಣಿತ ನಮ್ಮನ್ನು ನಿಜವಾಗಲೂ ಮೈಮರೆಸುತ್ತದೆ. ಜೂಜಿನಲ್ಲಿ ಮೈಮರೆತ ಜನಗಳಿಗೆ ದುಡ್ಡು ಕಳೆಯುವ ತನಕ ಇದು ಭೂಮಿಯ ಮೇಲಿನ ಸ್ವರ್ಗವೇ ಎನಿಸಬಹುದು.



ನಮಗೆ ಇದರಲ್ಲಿ ಜಾಸ್ತಿ ಆಸಕ್ತಿ ಇಲ್ಲದುದರಿಂದ, ನಾವು ಗ್ರಾಂಡ್ ಕೆನ್ಯಾನ್ ಆಯ್ಕೆ ಮಾಡಿದ್ದೆವು. ಮಾರನೆದಿನ ಬೆಳಗ್ಗೆ ಬಸ್ ನಲ್ಲಿ ಹೊರಟು ಏರ್ ಸ್ಟೇಷನ್ ತಲುಪಿದೆವು. ಅಲ್ಲಿ ನಮಗಾಗಿ ಹೆಲಿಕಾಪ್ಟರ್ ಮತ್ತು ಊಟದ ಪ್ಯಾಕೆಟ್ ತಯಾರಾಗಿ ಕಾದಿತ್ತು. ಮೇಲೇರಿದಂತೆಲ್ಲಾ ಹೊಸ ಅನುಭವ. ತಲೇ ಮೇಲೆ ಜೋರಾದ ಬಿಸಿಲು. ಸುತ್ತ ಬಂಡೆ.

ಗ್ರ್ಯಾಂಡ್ ಕೆನ್ಯಾನ್ ಎನ್ನುವುದು ಒಂದು ದೊಡ್ಡ 277 ಮೈಲಿ ಉದ್ದದ (446ಕಿ.ಮೀ.) ಕೊಲರಾಡೋ ನದಿ ಕೊರೆದಿರುವ ಕೊಳ್ಳ. ಸುಮಾರು 5–6ಮಿಲಿಯನ್ ವರ್ಷಗಳಿಂದ ಒಂದು ಮೈಲಿ ಆಳ(5000 ಅಡಿ) ಮತ್ತು 18 ಮೈಲಿ ಅಗಲದ ಭೌಗೋಳಿಕ ವಿಸ್ಮಯ. ವರ್ಷಕ್ಕೆ ಸುಮಾರು 5 ಮಿಲಿಯನ್ ಪ್ರವಾಸಿಗರು ಬರುವ ಯುನೆಸ್ಕೋ ಜಾಗತಿಕ ಪಾರಂಪರಿಕ ಸ್ಥಳ. ಆರಿಜೋನಾ ರಾಜ್ಯದ ಕೊಲರಾಡೊ ನದಿಯ 278 ಮೈಲಿ (447ಕಿಮೀ) ಆವರಿಸಿರುವ ಈ ಜಾಗ ಪುರಾತನ ಬುಡಕಟ್ಟಿನ ಜನಾಂಗದವರದು.

ನಮ್ಮನ್ನು ಹೆಲಿಕಾಪ್ಟರ್ ನಲ್ಲಿ ಕರೆದುಕೊಂಡು ಹೋಗಿ ಆ ಜಾಗಕ್ಕೆ ಬಿಟ್ಟರು. ನಾನು ಅದರ ಚಿತ್ರ ನೋಡಿದ ರೀತಿಯಲ್ಲಿ ಒಂದು ದೊಡ್ಡ ಅರ್ಧವೃತ್ತಾಕಾರದ ಗಾಜಿನ ಸೇತುವೆ ಕಾಣಿಸುತ್ತಿತ್ತು. ಆದರೆ ವಾಸ್ತವದಲ್ಲಿ ನೋಡಿದರೆ ಇಲ್ಲಿಯ ಮನೆಗಳ ಬಾಲ್ಕನಿಯ ರೀತಿಯಲ್ಲಿ ರೂಪುಗೊಂಡಿತ್ತು. ನನಗೆ ಅದನ್ನು ನೋಡಿ ಬಹಳ ನಿರಾಶೆಯಾಯಿತು. ಅದಕ್ಕೆ ಎಕ್ಸಟ್ರಾ 20 ಡಾಲರ್ ತೆಗೆದುಕೊಂಡಿದ್ದರು. ನನ್ನ ತಂಗಿ ಮತ್ತು

ಕಸಿನ್ ಅದನ್ನು ನೋಡಲು ಬರಲೇ ಇಲ್ಲ. ನಾನೇ ಬಲವಂತವಾಗಿ ಅವರನ್ನು ಕೆಳಗಡೆ ಹರಿಯುವ ನದಿ, ದೋಣಿಗಳನ್ನು ನೋಡುವ ದೃಶ್ಯ ಅಪರೂಪ, ನೋಡಿ ಬನ್ನಿ ಎಂದು ಕಳಿಸಿದೆ. ಅಲ್ಲಿಂದ ನಾವು 3 ಬಸ್ ಬದಲಾಯಿಸಿ ಏರ್ ಸ್ಟೇಷನ್ ಗೆ ಬರಬೇಕಾಯ್ತು. ಅಲ್ಲಿ ನಮಗಾಗಿ ಲಾಸ್ ವೇಗಾಸ್‌ನ ಬಸ್ ಕಾಯುತ್ತಿತ್ತು. ಹತ್ತಿ ರಾತ್ರಿ ಹೋಟೆಲ್‌ಗೆ ಬಂದಿಳಿದೆವು.

ಮಾರನೆದಿನ ನಾವು ಕ್ವೆಬೆಕ್‌ಗೆ ಡಕೋಟಾ ಪ್ಲೇನ್‌ನಲ್ಲಿ ಹೋಗಬೇಕಾಯಿತು. ಅಲ್ಲಿಂದ ನಮ್ಮ ಗಮ್ಯ ನಯಾಗರಾ ಫಾಲ್ಸ್. ನಯಾಗರಾ ಫಾಲ್ಸ್, ಜಗತ್ಪ್ರಸಿದ್ಧ ಶಕ್ತಿಯುತವಾದ ಒಂದು ತ್ರಿರೂಪ ಜಲಪಾತ. ಕುದುರೆ ಲಾಳದ ಜಲಪಾತ, ಅಮೆರಿಕನ್ ಜಲಪಾತ ಮತ್ತು ಬ್ರೈಡಲ್ ವೇಲ್ (ಓಂಟೇರಿಯೋ) ಜಲಪಾತ. ಕೆನಡಾ ದೇಶ ಮತ್ತು ಅಮೆರಿಕದ ಗಡಿಯಲ್ಲಿ 12,000 ವರ್ಷಗಳ ಹಿಂದೆ ಹೀಗೆ ಮೂರು ರೂಪದಲ್ಲಿ ಪ್ರಕಟಗೊಂಡಿದೆ. ಇದೊಂದು ಪ್ರವಾಸಿ ಕೇಂದ್ರ. ಇದು ಎರಡೂ ದೇಶಗಳಿಗೂ ಸಾಕಷ್ಟು ವಿದ್ಯುದುತ್ಪಾದನೆ ಮಾಡುತ್ತದೆ. ನಯಾಗರಾ ನದಿಯು ಲೇಕ್ ಎರಿ ಮತ್ತು ಲೇಕ್ ಓಂಟೇರಿಯೋವನ್ನು ಸೇರಿಸುತ್ತದೆ. ಸುಮಾರು 700,000 ಗ್ಯಾಲನ್ಸ್ ನೀರನ್ನು ಪ್ರತಿಯೊಂದು ಕ್ಷಣಕ್ಕೆ ಹೊರಹಾಕುವುದು ಇದರ ಹೆಗ್ಗಳಿಕೆ. ಸುಮಾರು 10,000ಜನರನ್ನು ಪ್ರತಿವರ್ಷ ಆಕರ್ಷಿಸುತ್ತದೆ. ಸಾಯಂಕಾಲದಲ್ಲಂತೂ ಬಗೆಬಗೆಯ ಬಣ್ಣಗಳ ದೀಪಗಳಿಂದ ಕಂಗೊಳಿಸುತ್ತದೆ. ವಿಧವಿಧ ಹೆಸರಿನಲ್ಲಿ ದೋಣಿಯವರು (ಕೇವ್ ಆಫ್ ದ ವಿಂಡ್ಸ್) ಬಣ್ಣ ಬಣ್ಣದ ರೈನ್ ಕೋಟ್‌ಗಳನ್ನು ಪ್ರವಾಸಿಗಳಿಗೆ ಕೊಡುತ್ತಾರೆ. ಆ ಅನುಭವ ಎಷ್ಟು ಬಣ್ಣಿಸಿದರೂ ಸಾಲದು.

**ವಾಷಿಂಗ್ಟನ್:** ಇದು ಅಮೆರಿಕದ ರಾಜಧಾನಿಯಾಗಿದ್ದು, ಪೊಟಾನಿಕ್ ಎನ್ನುವ ನದಿಯ ದಂಡೆಯ ಮೇಲಿದೆ. ಇದು ಮೇರಿಲ್ಯಾಂಡ್ ಮತ್ತು ವರ್ಜೀನಿಯಾ ರಾಜ್ಯಗಳ ಗಡಿಯಲ್ಲಿದೆ. ಇದು ಪುರಾತನ ಸಂಪ್ರದಾಯಗಳೊಂದಿಗೆ ಆಧುನಿಕತೆಯನ್ನೂ ಅಳವಡಿಸಿಕೊಂಡಿದೆ. ಇಲ್ಲಿ ಮೂರು ವಿಶೇಷಗಳೇನೆಂದರೆ **'ಶ್ವೇತ ಭವನ'**, ಸುಪ್ರೀಮ್ ಕೋರ್ಟ್ ಮತ್ತು ರಾಜಧಾನಿಯನ್ನು ಒಳಗೊಂಡಿದೆ. ಜಗತ್ಪ್ರಸಿದ್ಧ ಸ್ಮಾರಕಗಳು ಮತ್ತು (smith sonian ) ಮ್ಯೂಸಿಯಮ್‌ಗಳು, ವಾರ್ಷಿಕ ವಸಂತ ಋತುವಿನಲ್ಲಿ ಅದ್ದೂರಿಯಾಗಿ ನಡೆಯುವ ಚೆರ್ರಿ ಬ್ಲಾಸಮ್ ಫೆಸ್ಟಿವಲ್ (ಸಾವಿರಾರು ಚೆರ್ರಿಮರಗಳನ್ನು ಟೋಕಿಯೋನವರು ಉಡುಗೊರೆಯಾಗಿ ನೀಡಿದ), ಐತಿಹಾಸಿಕ ವಿಯೆಟ್ನಾಮ್ ವೆಟೆರನ್ ಮೆಮೊರಿಯಲ್, ವಾಷಿಂಗ್ಟನ್ ಸ್ಮಾರಕಗಳು, ಕೊರಿಯನ್ ವಾರ್‌ವೆಟರನ್ ಸ್ಮಾರಕ, ನ್ಯಾಷನಲ್ ಜಾಗತಿಕ ಎರಡನೆ ಮಹಾ ಯುದ್ಧಸ್ಮಾರಕ ಮತ್ತು ಜಾಫರ್ಸನ್ ಸ್ಮಾರಕ ಇವೆಲ್ಲ ನೋಡುವಂತಹುದು. ಏರ್ & ಸ್ಪೇಸ್ ಮ್ಯೂಸಿಯಮ್ ಮಾತ್ರ ನೋಡಲೇ ಬೇಕಾದದ್ದು.

ಜೊತೆಗೆ ಈಗಿನ ದುರ್ಘಟನೆ ನಡೆದ ಸ್ಥಳ **'ಗ್ರೌಂಡ್ ಜೀರೊ'** ವನ್ನು ಪುನರುಜ್ಜೀವನ ಗೊಳಿಸಿ ನಿಲ್ಲಿಸಿರುವ ಕಟ್ಟಡ. ಎಲ್ಲಿ ಟ್ವಿನ್ ಟವರ್‌ಗಳು ಸೆಪ್ಟೆಂಬರ್ 11, 2011ರಲ್ಲಿ ನಾಶವಾಯಿತೋ ಅಲ್ಲೇ ಅದನ್ನು ಮತ್ತೆ ಸ್ಮಾರಕವಾಗಿ ನಿಲ್ಲಿಸಿದ್ದಾರೆ. ಸರಿ ಸುಮಾರು 2977 ಜನರು ಅಂದು ಸಾವನ್ನಪ್ಪಿದ್ದಾರೆ. 104 ಮಹಡಿಯಿರುವ ಈ ಕಟ್ಟಡ (ಲೋವರ್ ಮ್ಯಾನ್ಹಟನ್) ಪಶ್ಚಿಮ ಗೋಳದಲ್ಲಿಯೇ ಎತ್ತರವಾದ ಕಟ್ಟಡವೆಂದು ಹೆಸರಾಗಿದೆ. ಅಲ್ಲಿಂದ ಮುಂದೆ ನಮ್ಮ ಪಯಣ ನ್ಯೂಯಾರ್ಕ್.

ನ್ಯೂಯಾರ್ಕ್, 5 ಪಟ್ಟಣಗಳು ಸೇರಿ ಒಂದು ಪಟ್ಟಣವಾಗಿದೆ. ಮ್ಯಾನ್ಹಟನ್, ಬ್ರೂಕ್ಲಿನ್, ಕ್ವೀನ್ಸ್, ಬ್ರಾಂಕ್ಸ್, ಮತ್ತು ಸ್ಟಾಟನ್ ದ್ವೀಪ ಸೇರಿ, ಹಡ್ಸನ್ ನದಿ ಅಟ್ಲಾಂಟಿಕ್ ಸಾಗರವನ್ನು ಸೇರುವ ದಂಡೆಯ ಮೇಲಿದೆ. ಮಧ್ಯದಲ್ಲಿ ಮ್ಯಾನ್ ಹಟನ್ ಇರುವುದರಿಂದ ಅಲ್ಲಿ ಜನಸಂದಣಿ ದಟ್ಟವಾಗಿದೆ. ಅದು ಜಗತ್ತಿನ ಮುಖ್ಯ ಆರ್ಥಿಕ, ಸಾಂಸ್ಕೃತಿಕ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಅಲ್ಲೇ ಗಗನಚುಂಬಿ ಕಟ್ಟಡಗಳಾದ ಎಂಪೈರ್ ಸ್ಟೇಟ್ ಕಟ್ಟಡ, ಸೆಂಟ್ರಲ್ ಪಾರ್ಕ್ ಮುಂತಾದುವುಗಳಿವೆ. ಹೆಸರಾಂತ ಬ್ರಾಡ್ವೇ ಥಿಯೇಟರ್ ನಿಯಾನ್ ಬೆಳಕಿನ ಟೈಮ್ಸ್ ಸ್ಕ್ವೇರ್‌ನಲ್ಲಿದೆ. ಸುಮಾರು 8.5 ಮಿಲಿಯನ್ ಜನಸಂಖ್ಯೆ ಇಲ್ಲಿದೆ.

**ಸ್ಟಾಚ್ಯು ಆಫ್ ಲಿಬರ್ಟಿ :** ನ್ಯೂಯಾರ್ಕ್ ಬಂದರಿನ ಲಿಬರ್ಟಿ ದ್ವೀಪದಲ್ಲಿರುವ ಒಂದು ದೈತ್ಯಾಕಾರದ ಶಾಸ್ತ್ರೋಕ್ತ ಶಿಲ್ಪ. ನಿಲುವಂಗಿಯನ್ನು ಹೊದ್ದು, ಕಿರೀಟವನ್ನು ಧರಿಸಿ ನಿಂತಿರುವ ಒಬ್ಬ ಮಹಿಳೆಯ ಶಿಲ್ಪ. 305 ಅಡಿ ಎತ್ತರವಿರುವ ಈ ತಾಮ್ರದ ಪ್ರತಿಮೆ ಜಗತ್ತಿನ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಬಿಂಬಿಸುವ ಒಂದು ಪ್ರತೀಕವಾಗಿ ನಿಂತಿದೆ. ಇದನ್ನು ಅಮೆರಿಕದ ಸ್ವಾತಂತ್ರ್ಯ ಶತಮಾನೋತ್ಸವದ ಸಂದರ್ಭದಲ್ಲಿ ಫ್ರಾನ್ಸ್ ಉಡುಗೆರೆಯಾಗಿ ನೀಡಿದೆ. (1776–1876) ಅಮೆರಿಕನ್ ಕ್ರಾಂತಿಯ ಸಂದರ್ಭದಲ್ಲಿ ಗುಲಾಮಗಿರಿಯ ನಿರ್ಮೂಲನವನ್ನು ಆಚರಿಸುವ ಸಲುವಾಗಿ ಎರಡೂ ರಾಷ್ಟ್ರಗಳ ಒಪ್ಪಂದದ ಮೇರೆಗೆ ಗೌರವಾರ್ಥವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ.

ನಾವುಗಳು, ಆ ತೀರಕ್ಕೆ ಬಸ್‌ನಲ್ಲಿ ಹೋಗಿ ಅಲ್ಲಿದ್ದ ಬೋಟ್ ಗಳಲ್ಲಿ ದ್ವೀಪವನ್ನು ತಲುಪಿದೆವು. ಎಲ್ಲರೂ ಪೀಸಾ ಟವರ್ ಕೈಲಿ ಎತ್ತಿದ ಹಾಗೆ, ಇದರ ಜೊತೆಗೂ ಹತ್ತಾರು ಫೋಟೊಗಳನ್ನು ಹೊಡೆದಿದ್ದಾಯ್ತು. ಜೊತೆಗೆ ಶಾಪಿಂಗ್ ಕೂಡ. ಒಂದು ದಿನ ಪೂರ್ತಿ ಕಳೆದು ವಾಪಸ್ಸು ಬಂದಿದ್ದಾಯ್ತು. ರಾತ್ರಿ ಟೈಮ್ ಸ್ಕ್ವೇರ್‌ನಲ್ಲಿ ನಮಗೇನೂ ಆಸಕ್ತಿಯಿಲ್ಲದ್ದರಿಂದ ಸುಮ್ಮನೆ ಒಂದು ಸುತ್ತು ತಿರುಗಿದ್ದಾಯ್ತು. ಅಲ್ಲಿಗೆ ನಮ್ಮ ಟೂರ್ ಪ್ಯಾಕೇಜ್ ಮುಗಿದಿತ್ತು. ವಾಪಸ್ಸು ಹೋಗುವವರು ಮಾರನೆ ದಿನ ಹೊರಟರು. ನಾವು ಮೂರು ಜನ ನನ್ನ ತಂಗಿ ಮತ್ತು ಸೋದರತ್ತೆ ಮಗಳು ನ್ಯೂಜೆರ್ಸಿಯಲ್ಲಿರುವ ಕಸಿನ್ ಮನೆಗೆ ಹೊರಟೆವು. ಮುಂದಿನ ಪಯಣ ನ್ಯೂಜರ್ಸಿ ಮತ್ತು ಡಲ್ಲಾಸ್.

# ಹಗುರ

(ಉಮಾ ರಾವ್ ಕಥೆಗಳು)

✍ ಉಮಾ ರಾವ್



ರಾಗಿಣಿ ವೈನ್ಸ್ ಎಂಬ ಹಳದಿ ನಿಯಾನ್ ಸೈನ್ ಹೊತ್ತ ಪುಟ್ಟದೊಂದು ವೈನ್ ಶಾಪ್ ಅದು. ಎದುರಿಗೆ ಕಾಣುವ ಗಾಜಿನ ಬೀರುವಿನಲ್ಲಿ ದುಬಾರಿ ಬ್ರಾಂಡುಗಳ ಪ್ರದರ್ಶನ ಹೊತ್ತ ಅದು ದೂರದಿಂದ ಒಳ್ಳೆ ದರ್ಜೆಯ ಅಂಗಡಿಯಂತೆಯೇ ಇದೆ. ಪಕ್ಕದಲ್ಲಿ ಈ ಅಂಗಡಿಗೆ ಇನ್ನೊಂದು ಬಾಗಿಲಿದೆ. ಅದಕ್ಕೆ ಹಾಕಿದ ಗುಲಾಬಿ ಹೂಗಳ ನೀಲಿ ತೆರೆಗೆ ಸ್ವಲ್ಪ ಮಣುಕು ಹಿಡಿದಿದೆ. ಪ್ರತಿ ಶನಿವಾರ ಅವನು ಆಫೀಸಿನಿಂದ ಮನೆಗೆ ಹೋಗುವಾಗ ಇಲ್ಲಿಗೆ ಬರುತ್ತಾನೆ. ಅದಕ್ಕೆ ಕಾರಣವೆಂದರೆ ಇಲ್ಲಿ ಗುರುತಿನವರ್ಯಾರೂ ಸಿಗುವ ಸಂಭವ ಕಡಿಮೆ. ಈ ಅಂಗಡಿಯೊಳಗೆ ಬರುವ ಮೊದಲು ಸುತ್ತಮುತ್ತ ಪರಿಚಯದವರ್ಯಾರೂ ಇಲ್ಲವೆಂದು ಖಾತ್ರಿ ಮಾಡಿಕೊಂಡು ಅಷ್ಟು ಧೈರ್ಯ ಕೂಡಿಸಿಕೊಳ್ಳುತ್ತಾನೆ. ಗಾಜಿನ ಕೇಸಿನ ಮೇಲೆ ವಾಲಿ "ಒಂದು ಕ್ವಾರ್ಟರ್" ಎಂದು ಪಿಸುಗುಟ್ಟುತ್ತಾನೆ. ಏನೆಂದು ಮೊದಲೇ ಅರಿತ ಅಂಗಡಿಯವನು ತಲೆ ಹಾಕಿದಾಗ, ಅವನ ಕಣ್ಣಿಂದೆ ಒಂದು ಕ್ಷಣ ಗೋಡೆ ಮೇಲೆ ಮಿಣುಕು ಮಿಣುಕು ಮಾಡುವ ಪುಟಾಣಿ ಬಣ್ಣದ ಬಲ್ಬುಗಳ ಹಾರ ಹೊತ್ತ ಗಜಲಕ್ಷ್ಮಿ ಫೋಟೊ ಹಾದು ಹೋಗುತ್ತದೆ. ಅವನು ಬಾಟಲ್ ಪ್ಯಾಕ್ ಮಾಡಲು ಒಳಗೆ ಹೋದಾಗ, ಇವನು ತನಗೂ ಊದುಬತ್ತಿ ವಾಸನೆ ತುಂಬಿದ ಆ ಅಂಗಡಿಗೂ ಏನೂ ಸಂಬಂಧವಿಲ್ಲವೆನ್ನುವಂತೆ ಪಕ್ಕದ ಪಾನ್‌ದೂಕಾನಿಗೆ ಹೋಗಿ ಪೋಲೋ ಕೊಳ್ಳುತ್ತಾನೆ.

ಆ ಕ್ಷಣ ಅಂಚು ಹರಿದ ನೀಲಿ ಪ್ಯಾಂಟಿನವನೊಬ್ಬ ನೇರವಾಗಿ ನಡೆದು ಬಂದು ಪಕ್ಕದ ಬಾಗಿಲಿಗೆ ಹೋಗಿ ಪರದೆ ಸರಿಸುತ್ತಾನೆ. ಹಾಗೇ "ಒಂದು" ಎಂದು ಕೈ ಸನ್ನೆ ಮಾಡುತ್ತಾನೆ, ಕಾಯುತ್ತಾನೆ. ಪರದೆಯ ಹಿಂದೆ ನಿಂತ ಬಳೆ ತುಂಬಿದ ಕಪ್ಪು ಒರಟು ಕೈಯೊಂದು ಹಳದಿ ದ್ರವದ ಗ್ಲಾಸನ್ನು ಮುಂದೆ ಹಿಡಿಯುತ್ತದೆ. ಅವನು ಒಂದೇ ಏಟಿಗೆ ಅದನ್ನು ಇಳಿಸಿ, ಜೇಬಿನಿಂದ ಚಿಲ್ಲರೆ ತೆಗೆದು ಎಣಿಸಿ ಕೌಂಟರ್ ಮೇಲಿಟ್ಟು ಮಾತಾಡದೆ ನಡೆಯುತ್ತಾನೆ.

"ಸಾರ್" ಎಂದ ಅಂಗಡಿಯವನ ದನಿಗೆ ಬೆಚ್ಚಿ, ಇತ್ತ ಒಂದು ಕಪ್ಪು ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿದ್ದ ಬಾಟಲನ್ನು ಮಡಿಸಿ ಕೈಯಲಿಟ್ಟುಕೊಂಡಿದ್ದ ಬಟ್ಟೆ ಚೀಲದಲ್ಲಿ ಹಾಕಿಕೊಳ್ಳುತ್ತಾನೆ. ಮೊದಲೇ ಎಣಿಸಿಕೊಂಡು ಇಟ್ಟುಕೊಂಡಿದ್ದ ಹಣವನ್ನು ಕೌಂಟರಿನ ಮೇಲಿಟ್ಟು ಬೇಗ ಬೇಗ ಕಾಲು ಹಾಕುತ್ತಾನೆ. ಮನೆಗೆ ಬಂದವನೇ ತನ್ನ ಬಾಟಲ್, ಸೋಡಾ, ಒಂದು ಗ್ಲಾಸ್, ಪುಟ್ಟ ಕ್ಯಾಸೆಟ್ ಕಾರ್ಡರ್ ಎತ್ತಿಕೊಂಡು ಟೆರೇಸ್ ಸೇರಿ ಬಾಗಿಲು ಮುಂದು ಮಾಡುತ್ತಾನೆ. ಅದಕ್ಕೆ ಮೊದಲು ಫೋನ್ ಬಂದರೆ ತಲೆ ನೋವೆಂದು ಮಲಗಿರುವನೆಂದು ಹೇಳಲು ಹೆಂಡತಿಗೆ ಹೇಳುತ್ತಾನೆ. ಟೆರೇಸ್ ಮೇಲಿದ್ದ ಒಂಟಿ ಕುರ್ಚಿಯ ಮೇಲೆ ಕೂತು, ಮಬ್ಬುಗತ್ತಲಿನಲ್ಲಿ ಗ್ಲಾಸಿಗೆ ಮದ್ಯ ಸುರಿದು, ಪಂಕಜ್ ಉದಾಸನ ಗಜಲ್ ಹಾಕುತ್ತಾನೆ. ಗಂಟೆ ಕಳೆದು, ಹೆಂಡತಿ ಮೆಲ್ಲಗೆ ಬಾಗಿಲು ತಟ್ಟಿ "ಊಟಕ್ಕೇಳ್ತೀರಾ" ಎಂದಾಗ ಅವನು ತೇಲುತ್ತಿರುತ್ತಾನೆ. ಜಗತ್ತೆಲ್ಲಾ ಸುಂದರವಾಗಿ, ಮನಸ್ಸಿಗೆ ಬಂದವರೆಲ್ಲಾ ಪ್ರಿಯರೆನಿಸ ತೊಡಗಿರುತ್ತಾರೆ. ಆಗ ಥಟ್ಟನೆ ಆ ಹರುಕು ಅಂಚಿನ ನೀಲಿ ಪ್ಯಾಂಟಿನವನ ನೆನಪಾಗಿ, ಅವನು ಕ್ಷಣದಲ್ಲೇ ಕಂಡುಕೊಂಡ ಅದೇ ಹಗುರತೆಯ ಬಗ್ಗೆ ಹೊಟ್ಟೆಕಿಚ್ಚೆನಿಸುತ್ತದೆ.

******

## ಕಪ್ಪು ಬ್ರಾ

ಅಮ್ಮ ಎಲ್ಲಾ ವಿಷಯದಲ್ಲೂ ಅಂಥಾ ಹಳೇ ಕಾಲದವಳೇನಲ್ಲ, ನಾನು ಜೀನ್ಸ್ ಹಾಕ್ಕೊಂಡ್ರೆ, ಎಂಟೀವಿ ನೋಡಿದ್ರೆ, ಕಾಲೇಜು ಪಿಕ್‌ನಿಕ್ ಗಳಿಗೆ ಹೋದ್ರೆ ಬೇಡ ಅನ್ನೋಲ್ಲ. ಆದರೆ, ಕಪ್ಪು ಬ್ರಾ ಮಾತೆತ್ತಿದ್ರೆ ಅದೇಕೆ ಹಾಗೆ ಮೈಮೇಲೆ ಬಂದೋಳ ಹಾಗೆ ಆಡ್ತಾಳೋ ಗೊತ್ತಿಲ್ಲ. ಅಮ್ಮಾ ಒಂದು ಕಪ್ಪು ಬ್ರಾ ತಗೋಬೇಕು ಅಂತಿದ್ದ ಹಾಗೇ, ಸದ್ಯ ನಾನಂತೂ ಎಷ್ಟೆಲಾ ಅನುಭವಿಸಿದೆ ನಿನಗ್ಗೊತ್ತು. ಹತ್ತು ದಿನದ ಬಾಣಂತೀನ ಬಿಟ್ಟು ಓಡಿ ಹೋದ್ದಲ್ಲಾ ನಿಮ್ಮಪ್ಪ, ಅದರಲ್ಲಿ ನಂದೇನು ತಪ್ಪಿತ್ತು. ಎಷ್ಟು ಕಷ್ಟಪಟ್ಟು ಬೆಳೆಸಿದೀನಿ ನಿನ್ನನ್ನ, ಇಂಥಾ ಕೆಲಸ ಮಾಡಿ ನೀನೂ ಕೈ ಕೊಡಬೇಡ ಎಂದೆಲ್ಲಾ ಮಾತುಗಳನ್ನಾಡುತ್ತಾಳೆ.

ನಿಂಗೋಸ್ಕರ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದೆ. ಒಂದೊಳ್ಳೆ ಸೀರೆ ಉಡಲಿಲ್ಲ, ಒಂದು ಸಿನಿಮಾ ನೋಡಲಿಲ್ಲ, ಸ್ಕೂಲಾಯ್ತು ಮನೆ ಆಯ್ತು. ಇನ್ನು ಎಷ್ಟೋ ಜನ ನನ್ನಂಥವರು ಮಾಡುವಂತೆ... ಎಂದು ಅಲ್ಲಿಗೆ ಮಾತು ನಿಲ್ಲಿಸುತ್ತಾಳೆ, ಮತ್ತೆ ಮದುವೆಯಾಗಲಿಲ್ಲ ಎಂದು ವಾಕ್ಯ ಪೂರ್ತಿ ಮಾಡಲು ಅವಳಿಗೇಕೋ ಇನ್ನೂ ಬಾಯಿ ಬಂದಿಲ್ಲ.

ಎಷ್ಟೋ ಸಲ ಇವತ್ತು ಈ ವಿಷಯ ಬಗೆಹರಿಸಿಬಿಡಲೇಬೇಕು ಎಂದುಕೊಂಡಿದ್ದೇನೆ. ಅಮ್ಮಾ ನೀನು ನನಗಿಂತ ಒಂದು ಜನರೇಷನ್ ಹಿಂದಿನವಳು. ನಿಂಗೆ ಕಪ್ಪು ಬ್ರಾ ಅಂದ್ರೆ ಮರಿಲಿನ್ ಮನ್ರೋ, ಬ್ರಿಜ್ ಬಾರ್ಡೋ, ಹೆಲೆನ್, ಕ್ಯಾಬರೆ ಡ್ಯಾನ್ಸರ್, ಬಾರ್ ಹುಡುಗಿಯರು ನೆನಪು ಬರೋದ್ರಲ್ಲಿ ಆಶ್ಚರ್ಯವಿಲ್ಲ. ಆದರೆ ಈಗ ಎಲ್ಲರೂ... ಅನ್ನುತ್ತಲೇ ಈಗಲೂ ಸರಿಯಾದೋರು ಯಾರು ಹಾಕ್ಕೋತ್ತಾರೆ ತೋರಿಸು, ನಾನು ಹಾಕ್ಕೋತೀನಾ... ನಿಮ್ಮ ಶಾರದಮ್ಮ ಟೀಚರ್, ಜಾನಿ ಅತ್ತೆ ಯಾರಾದ್ರೂ... ಎಂದು ಸವಾಲೆಸೆಯುತ್ತಾಳೆ.

ಅಮ್ಮಾ ನಾನು ನೀನೂ ಅಲ್ಲ, ಅವರು ಅಲ್ಲ ಅನ್ನುತ್ತಿದ್ದಾಗಲೇ ಇನ್ನೇಲೆ ಈ ವಿಷಯ ಚರ್ಚೆ ಮಾಡಿ ನನ್ನ ತಲೆ ಕೆಡಿಸ್ಬೇಡ. ನಿನ್ನ ಮದುವೆ ಆಗಿಬಿಡ್ಲಿ. ಆಮೇಲೆ ಕಪ್ಪೋ ಕೆಂಪೋ ಯಾವ ಬಣ್ಣದ್ದು ಏನು ಬೇಕಾದ್ರೂ ಹಾಕ್ಕೋ... ಎನ್ನುತ್ತಾ ನನ್ನ ಕಣ್ಣು ತಪ್ಪಿಸಿ ಅಲ್ಲಿಂದ ಎದ್ದು ಹೋಗುತ್ತಾಳೆ. ಆದರೆ ನನಗೂ ಏಕೋ ಅವಳ ಮಾತು ಮೀರಿ ಒಂದು ಕಪ್ಪು ಬ್ರಾ ಕೊಳ್ಳಲು ಆಗುತ್ತಲೇ ಇಲ್ಲ.

## ಚಾರ್ಲಿ

ಅಷ್ಟು ಬಣ್ಣ ಬಳಿದರೂ ಮುಖದ ನೆರಿಗೆಗಳು ಎದ್ದು ಕಾಣುತ್ತದೆಯೇ ಹೊರತು ಅಳಿಸುವುದಿಲ್ಲ. ಮ್ಯಾನೇಜರೂ ಹಿಂದೆ ಬಿದ್ದಿದ್ದಾನೆ. ನೀನೀಗ ತುಂಬಾ ಸ್ಲೋ ಆಗ್ತಿದೀಯ, ಇನ್ನು ನಿನ್ನನ್ನು ಜಂಪಿಂಗ್ ಚಾರ್ಲಿ ಅನ್ನುವ ಬದಲು ಲಿಂಪಿಂಗ್ ಚಾರ್ಲಿ ಅಂತಾರೆ ಅಷ್ಟೊಂತ ಪದೇ ಪದೇ ಕೆಣಕುತ್ತಾನೆ. ಈಗೀಗ ಕುಣಿದು ಕುಪ್ಪಳಿಸುವುದು ಸುಲಭವಲ್ಲ, ಮಂಡಿನೋವು ಜೋರಾಗುತ್ತಿದೆ, ತನಗೆ ನಲವತ್ತೈದೇ ಆಯಿತೋ ಏನೋ... ಎಷ್ಟೇ ನೋವಾದ್ರೂ ಕಣ್ಣಿಂದ ನೀರು ಹರಿಯುವ ಹಾಗಿಲ್ಲ, ಕೆನ್ನೆ ಕೆಂಪು ಕೆಡುವ ಹಾಗಿಲ್ಲ.

ತಾನೇಕೆ ಹೀಗೆ ಹುಟ್ಟಿದೆ? ಅದು ತನ್ನ ತಪ್ಪೇ? ನಮ್ಮಮ್ಮ ಅಪ್ಪ ನನ್ನ ಹಾಗಿರಲಿಲ್ಲವಂತೆ. ನನ್ನ ಬಗ್ಗೆ ಸ್ವಲ್ಪ ಅನುಮಾನ ಬಂದ ಕೂಡಲೇ ತಮ್ಮೂರಿಗೆ ಬಂದಿದ್ದ ಸರ್ಕಸ್ ಟೆಂಟಿನ ಪಕ್ಕ ಒಂದು ದಿನ ಅಪರಾತ್ರಿ ಬಿಟ್ಟು ಬಂದರಂತೆ. ಇವರು ಸಂತೋಷದಿಂದಲೇ ಪುಕ್ಕಟೆ ಸಿಕ್ಕ ಕುಳ್ಳನನ್ನು ತಮ್ಮವನಾಗಿಸಿಕೊಂಡು ಬೆಳೆಸಿ, ಬಳಸಿದರು. ಎಲ್ಲರೂ ಪುಟಾಣಿ ಪುಟಾಣಿ ಅಂತ ಕರೆದರಂತೆ. ಅದೇ ಹೆಸರು ಬಿದ್ದು ಹೋಯ್ತು. ಅಂದಿನಿಂದ ತಾನು ಸರ್ಕಸ್‌ನವರಿಗೆಲ್ಲಾ ಪುಟಾಣಿ ಚಾರ್ಲಿ. ಜಗತ್ತಿಗೆ ಬರಿಯ ಚಾರ್ಲಿ. ಇದೆಲ್ಲಾ ತನಗೆ ತಿಳಿದು ಬಂದಿದ್ದು ಬುದ್ಧಿ ಬಂದ ಮೇಲೆ. ಅವರಿವರ ಬಾಯಿಂದ.

ಇಂದಿಗೂ ದಿನಾ ಬ್ಯಾಂಡಿಗೆ ಸರಿಯಾಗಿ ಲಾಗ ಹಾಕಿ, ಕೊಳಕು ಜೋಕು ಮಾಡಿ ಜನರನ್ನು ನಗಿಸಿ, ಒಂದು ಚಕ್ರದ ಸೈಕಲ್ ಹುಡುಗಿಯರ ಫ್ರಾಕೆತ್ತಿ ಒದೆ ತಿಂದು ಕಿರುಚಿ, ಕೈ ಆಡಿಸುತ್ತಾ ಒಂದು ಕೊನಯಿಂದ ಇನ್ನೊಂದು ಕೊನೆಗೆ ಓಡುವಾಗ ಕಣ್ಣುಗಳು ಆ ಸಾವಿರಾರು ಜನರ ನಡುವೆ ಅಲ್ಲಲ್ಲಿ ಕೂತ ವೃದ್ಧ ದಂಪತಿಗಳತ್ತ ಓಡುತ್ತದೆ. ಇವರಿರಬಹುದೇ?

ಎರಡು ವರ್ಷಗಳ ಹಿಂದೆ ಅಮೆರಿಕಾದಿಂದ ಒಬ್ಬ ಬಿಳಿಯ ಬಂದಿದ್ದ, ಸರ್ಕಸ್‌ನಲ್ಲಿ ಕೆಲಸ ಮಾಡೋ ನಮ್ಮಂಥವರ ಮೇಲೆ ಪುಸ್ತಕ ಬರೀತಿದ್ದ. ಅವನು ಹೇಳಿದ್ದು ನೆನಪಾಗುತ್ತೆ. ನಮ್ಮಂಥವರನ್ನು ಕುಳ್ಳರು ಅನ್ನೋ ಹಾಗಿಲ್ಲ. ಅವರು “ಲಿಟಲ್ ಪೀಪಲ್” ಅಷ್ಟೇ. ಅಲ್ಲಿ ನಮ್ಮಂಥವರ ಕಂಡರೆ ಹೀನಾಯ ಮಾಡುವುದೂ ಇಲ್ಲ, ತೆಳ್ಳಗೆ ಬೆಳ್ಳಗೆ ಎತ್ತರವಾಗಿರುವ ಸುಂದರ ಹುಡುಗಿಯರು ನಿಮ್ಮನ್ನು ಮದುವೆಯಾಗ್ತಾರೇ ಗೊತ್ತಾ?” ಎಂದ. ಹೊಟ್ಟೆ ಉರಿದು ಹೋಯಿತು.

ಈಗ ರಿಂಗ್ ರಿಂಗ್ ಮೇರೀನೇ ತನ್ನನ್ನು ಮದುವೆ ಆಗ್ತಾಳಾ? ಅವಳನ್ನು ಕಂಡರೆ ಸಾಕು, ಬಯಕೆಯಿಂದ ಮೈಯೆಲ್ಲಾ ಕಿಚ್ಚು ಹತ್ತಿದಂತೆ ಆಗುತ್ತದೆ. ಅವಳು ಹೇಳಿದ ಕೆಲಸಾನೆಲ್ಲಾ ಮಾಡ್ತೀನಿ, ಖುಷಿಯಾಗ್ತಾಳೆ. ಅವತ್ತಂತೂ ಆ ಬೆಂಕಿ ಹಚ್ಚಿದ ರಿಂಗಿನಿಂದ ಮುಖ ಸುಟ್ಟು ಹೋಗುವುದರಲ್ಲೇ ಇತ್ತಲ್ಲಾ, ತಾನೇ ತಪ್ಪಿಸಿದ್ದು. ಆಮೇಲೆ ತಬ್ಬಿಕೊಂಡು ಅತ್ತೇ ಬಿಟ್ಟಳು. ತುಂಬಾ ಮಾತಾಡ್ತಾಳೆ ಸಲಿಗೆಯಿಂದ. ಆದರೆ ಅತೀ ಸಲಿಗೆ. ಅದೇ ನೋವಾಗೋದು. ಆ ಟ್ರೆಪೀಝ್ ಆರ್ಟಿಸ್ಟ್ ಮೋಹನ ರಾಜಾ ಜೊತೆ ತನ್ನ ಭೇಟಿಗಳು, ಹಸಿ ಜಗಳಗಳು, ಪ್ರಣಯ ಚೇಷ್ಟೆಗಳು, ಎಲ್ಲದರ ಬಗ್ಗೆ ವಿವರವಾಗಿ ಹೇಳ್ತಾಳೆ. ಕಿಸಿ ಕಿಸಿ ನಗ್ತಾಳೆ. ಬೇರೆ ಯಾರ ಹತ್ತಿರಾನೂ ಬಾಯಿ ಬಿಡೊಲ್ಲ. ಒಂದು ಸಲ ಅಂತೂ ನಾಲಿಗೆ ತುದಿವರೆಗೂ ಬಂದುಬಿಟ್ಟಿತ್ತು, ಪ್ಲೀಸ್ ಇದೆಲ್ಲ ಹೇಳಿ ನನ್ನನ್ನು ಕೊಲ್ಲಬೇಡಾಂತ ಹೇಳಿಯೇ ಬಿಡೋಣ ಅಂತ.

ಎಷ್ಟು ದಿನ ಇದೇ ಬದುಕು? ಬರೀ ಚಾರ್ಲಿ ಕೆಲಸ ಮಾಡಿದರೆ ಸಾಲದು. ಉಸ್ಸಪ್ಪಾಂತ ಕೂಡುವ ಹಾಗಿಲ್ಲ. ಎಲ್ಲರ ಊಟ, ತಿಂಡಿ ಸಪ್ಲೈ ಮಾಡಬೇಕು. ಅಡಿಗೆ ಪಾತ್ರೆ ತೊಳೆಯಬೇಕು. ಆನೆ ಲದ್ದಿ ಸಾಫ್ ಮಾಡಬೇಕು. ಮ್ಯಾನೇಜರ್ ಬೂಟ್ಸ್ ಪಾಲಿಶ್ ಮಾಡಬೇಕು. ನೆಟ್ ಗಟ್ಟಿಯಾಗಿ ಕಟ್ಟಿದೆಯೇ ಚೆಕ್ ಮಾಡಬೇಕು. ಇದರ ಮೇಲೆ ನೂರು ಕೊಂಕು ಮಾತು ಕೇಳಬೇಕು ಏ ಪುಟಾಣಿ... ನಿನ್ನದೆಲ್ಲಾ ಪುಟಾಣಿ ಏನೋ ಅಂತೆಲ್ಲಾ. ಈ ಕಾಟವೆಲ್ಲಾ ತನಗೆ ಮಾತ್ರ. ಬೇರೆ ಸೂಳೆ ಮಕ್ಕಳು ಆರ್ಟಿಸ್ಟುಗಳು. ತಾನು ಮಾತ್ರ ಬರೀ ಚಾರ್ಲಿ.

ಇಷ್ಟೆಲ್ಲಾ ಆದರೂ ಮುಗಿಯುತ್ತಿಲ್ಲ. ದಿನ ಬಿಟ್ಟು ದಿನ ಅರ್ಧ ರಾತ್ರಿಯಲ್ಲಿ ರಿಂಗ್ ಮಾಸ್ಟರ್ ದಾರಾನ ಕರೆ ತಪ್ಪದೆ ಬರುವುದೇ. ಅಂತಹ ವಿಕ್ಷಿಪ್ತ ರಾತ್ರಿಗಳಲ್ಲೂ ಒಂದೇ ಒಂದು ಸಮಾಧಾನವೆಂದರೆ, ಎಲ್ಲಾ ಮುಗಿದ ನಂತರ ದಾರಾನ ಟೆಂಟಿನಲ್ಲಿ ಆರಾಮಾಗಿ ನಿದ್ದೆ ಮಾಡಬಹುದು. ಅಲ್ಲಿ ಇಲಿಗಳ ಕಾಟವಿಲ್ಲ.

●

# ಋಣ

**(ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆಗೆ ಬಂದ ಕಥೆ)**

✍ **ಮಾಲತಿ ಮುದಕವಿ, ಧಾರವಾಡ.**

ಪ್ರಕಾಶನು ತನ್ನ ಐಶಾರಾಮಿ ಕಾರನ್ನು ಪಾರ್ಕ್ ಮಾಡಿ ಮನೆಯಲ್ಲಿ ಕಾಲಿರಿಸುವಾಗಲೇ ಅವನ ದೃಷ್ಟಿಯು ಬಾಗಿಲಿನ ಹೊರಗಿದ್ದ ಇನ್ನೊಂದು ಜೋಡಿ ಚಪ್ಪಲಿಯತ್ತ ಹೊರಳಿತ್ತು. ಉಂಗುಟ ಕಿತ್ತು ಬಹಳ ಸಾರಿ ರಿಪೇರಿ ಆದಂಥ ಆ ಚಪ್ಪಲಿಗಳಲ್ಲಿ ಇನ್ನು ರಿಪೇರಿ ಮಾಡಲು ಸಾಧ್ಯವೇ ಇಲ್ಲದಂತೆ ಹೊಲಿಗೆಗಳು ತುಂಬಿದ್ದವು. ಮಣ್ಣು ಮೆತ್ತಿದ್ದ ಆ ಚಪ್ಪಲಿಗಳನ್ನು ಅವುಗಳ ಒಡೆಯನ ಬಗ್ಗೆ ಆಗಲೇ ಪ್ರಕಾಶನಿಗೆ ಹೊಳೆದಿತ್ತು. ಹುಬ್ಬುಗಳು ಗಂಟಾಗಿದ್ದವು.

ಒಳಗೆ ಸೋಫಾದ ಮೇಲೆ ಮುಳ್ಳಿನ ಮೇಲೆ ಕುಳಿತಂತೆ ಚಡಪಡಿಸುತ್ತಲಿದ್ದ ಪ್ರವೀಣನು ಅಣ್ಣನ ದಾರಿಯನ್ನೇ ಕಾಯುತ್ತಿದ್ದನು. ಪ್ರವೀಣನು ಅಲ್ಲಿ ಬಂದಾಗ ಆಗಲೇ ಐದು ಗಂಟೆಯಾಗಿತ್ತು. ತನ್ನ ಸಾಮಾಜಿಕ ಕಾರ್ಯಕ್ರಮಗಳನ್ನು ಮುಗಿಸಿ ದೀಪ್ತಿಯೂ ಅದೇತಾನೆ ಮನೆಗೆ ಬಂದಿರಬೇಕು. ಇನ್ನೂ ಬಟ್ಟೆ ಕೂಡ ಬದಲಿಸಿರಲಿಲ್ಲ. ಅರೆ ತೋಳಿನ ಬ್ಯಾಕ್‌ಲೆಸ್ ರವಿಕೆ, ಅದೇ ಬಣ್ಣದ ಸೀರೆ... ಬೆಲ್ ಬಾರಿಸಿದ್ದ ಪ್ರವೀಣನನ್ನು ನೋಡಿ ಇಲ್ಲದ ಮುಗುಳ್ನಗೆಯನ್ನು ಬಣ್ಣ ಮೆತ್ತಿದ ತುಟಿಗಳ ಮೇಲೆ ತರುತ್ತ ಆಕೆ ಒಳಗೆ ಹೋಗಿ ಒಂದು ತಂಬಿಗೆ ನೀರು, ಒಂದು ಕಪ್ ಚಹಾ ತಂದಿರಿಸಿದವಳು ಹೊರಗೂ ಬಂದಿರಲಿಲ್ಲ. ಪ್ರವೀಣನಿಗೆ ಅತ್ತಿಗೆಯ ಸ್ವಭಾವದ ಪರಿಚಯವು ಚೆನ್ನಾಗಿಯೇ ಇದ್ದುದರಿಂದ ಅವನು ಹೊರಗಿನ ಹಾಲಿನಲ್ಲಿಯ ಸೋಫಾದ ಮೇಲೆಯೇ ಕುಳಿತು ಸಮಯವನ್ನು ಕಳೆಯಲು ತನ್ನ ಕಿಸೆಯಲ್ಲಿಯ ಪುಟ್ಟ ಡೈರಿಯನ್ನು ತೆಗೆದು ಆ ತಿಂಗಳ ಖರ್ಚನ್ನು ಹೊಂದಿಸುವ ಪ್ರಯತ್ನದಲ್ಲಿದ್ದನು. ಡಾಕ್ಟರ್ ಖರ್ಚು, ಮನೆಯ ಖರ್ಚು, ಹೊಲ, ತೋಟಗಳ ಖರ್ಚು, ಕೆಲಸಗಾರರಿಗೆ ಕೊಡಬೇಕಾದ ಕೂಲಿ, ಮಕ್ಕಳ ಶಾಲೆಯ ಖರ್ಚು, ಎಷ್ಟೇ ಹೊಂದಿಸಿದರೂ ದೊಡ್ಡ ಮೊತ್ತವೇ ಕಡಿಮೆ ಬೀಳುತ್ತಲಿತ್ತು.

"ಯಾವಾಗ ಬಂದೀ..."

ಪ್ರಕಾಶನು ಕಾಟಾಚಾರಕ್ಕೆ ಎನ್ನವಂತೆ ತಮ್ಮನನ್ನು ಕೇಳಿದ್ದ.

ಅಣ್ಣನನ್ನು ನೋಡಿದ ಪ್ರವೀಣನು ಪಟ್ಟನೆ ಎದ್ದು ನಿಂತಿದ್ದ.

"ಸ್ವಲ್ಪ ಹೊತ್ತಾತು ಅಣ್ಣ. ನೀನು ಈಗ ಬಂದ್ಯಾ."

"ಹೂಂ.. ದೀಪ್ತೀ, ಪ್ರವೀಣ ಬಂದಾನ... ಚಹಾ, ಜೋಡಿ ಏನರೆ ತೊಗೊಂಬಾ.." ಎನ್ನುತ್ತಿದ್ದಂತೆಯೇ ಪ್ರವೀಣನು "ಇಲ್ಲಣ್ಣ, ಚಹಾ ಆಗೇದ ನಂದು ಬಂದಕೂಡ್ಲೇ. ಬಟ್ಟೀ ಬದಲಾಯ್ಸು. ನೀ ಕುಡಿ." ಎಂದು ಸಂಕೋಚದಿಂದ ಹೇಳುತ್ತ, ತನ್ನ ಜೊತೆಯಲ್ಲಿ ತಂದಿದ್ದ ಕಮಟು ಚೀಲದಿಂದ ಹತ್ತು ಹನ್ನೆರಡು ಸುಲಿದ ತೆಂಗಿನಕಾಯಿ, ಒಂದು ಗಡ ಬಾಳೆಹಣ್ಣು, ಎರಡು ಮೂರು ತರದ ಕಾಯಿಪಲ್ಯ ಎಲ್ಲವನ್ನೂ ಹೊರಗೆ ತೆಗೆದಿರಿಸಿದ್ದ. ಎರಡು ಹೆಜ್ಜೆ ನಡೆಯಲೂ ಕಾರು ಬೇಕಾದ ತಾನೆಲ್ಲಿ? ಸುಮಾರು ಭಾರವನ್ನು ಬಸ್ ಸ್ಟ್ಯಾಂಡಿನಿಂದ ಹೊತ್ತು ತಂದಿದ್ದ ತಮ್ಮನೆಲ್ಲಿ? ಅವನ ಬಗ್ಗೆ ಮರುಕವೆನ್ನಿಸಿತ್ತು. ಒಂದೇ ಕ್ಷಣ..

ಬಾಗಿಲಿನ ಸಂದಿಯಿಂದ ಇವರ ಮೇಲೆ ಕಣ್ಣಿರಿಸಿದ್ದ ದೀಪ್ತಿಯ ಕಣ್ಣುಗಳು ಅವೆಲ್ಲವನ್ನು ನೋಡಿ ಅರಳಿದ್ದವು. ಆರ್ಗ್ಯಾನಿಕ್ ಹಣ್ಣು, ಕಾಯಿ, ತರಕಾರಿ. ಇವೆಲ್ಲವೂ ಈ ಶಹರದಲ್ಲಿ ಸಿಗದ ಅಪರೂಪದ ವಸ್ತುಗಳು. ಅದಕ್ಕಾಗಿಯೇ ಅವಳು ಮೈದುನನ ಚೀಲದ ಕಮಟು ವಾಸನೆಯನ್ನು ಸಹಿಸುತ್ತಿದ್ದಳು. ಒಂದೆರಡು ಬಾರಿ ಅವಳ ಕ್ಲಬ್ಬಿನ ಗೆಳತಿಯರು ಮನೆಗೆ ಬಂದಾಗ ಪ್ರವೀಣನು ಕೂಡ ಯಾವುದೋ ಕಾರಣಕ್ಕಾಗಿ ಬಂದವನು ಮನೆಯಲ್ಲಿಯೇ ಇದ್ದನು. ಅವನನ್ನು ನೋಡಿದ ಅವರು ಯಾರೆಂದು ಕೇಳಿದಾಗ ಅವಳಿಗೆ ಅವನನ್ನು ತನ್ನ ಮೈದುನನೆಂದು ಪರಿಚಯಿಸಲೂ ಮರ್ಯಾದೆ ಸಾಕಿರಲಿಲ್ಲ. ಅವರನ್ನು ಮಾತು ಮರೆಸಿ ತನ್ನ ರೂಮಿಗೆ ಕರೆದೊಯ್ದಿದ್ದಳು. ಇದೆಲ್ಲವೂ ಪ್ರವೀಣನಿಗೆ ಗೊತ್ತಿದ್ದರೂ ಅಣ್ಣನ ಸಲುವಾಗಿ ಅವನು ಆ ಮನೆಗೆ ಬರುತ್ತಿದ್ದನು.

ಮುಖ ತೊಳೆದು ಬಟ್ಟೆ ಬದಲಾಯಿಸಿಕೊಂಡು ಕೈಯಲ್ಲಿ ಎರಡು ಕಪ್ಪು ಚಹಾ ಹಿಡಿದು ಬಂದ ಪ್ರಕಾಶನು "ಏನು ಈಗ? ನಡುವ ಬಂದೀ? ಸುಗ್ಗೀನೂ ಅಲ್ಲಾ. ಬಿತ್ತನೀನೂ ಅಲ್ಲಾ.." ಎನ್ನುತ್ತ ಅವನ ಕೈಗೊಂದು ಕಪ್ಪನ್ನಿರಿಸಿ ತಾನೂ ಕುಡಿಯತೊಡಗಿದ್ದನು. ದೀಪ್ತಿಯು ಅವಲಕ್ಕಿಯ ಎರಡು ಪ್ಲೇಟುಗಳನ್ನು ತಂದಿರಿಸಿದ್ದಳು.

"ಅವ್ವಗ ಅರಾಮಿಲ್ಲಾ.. ಜ್ವರಾ ಬರಲಿಕ್ಕತ್ತ್ಯಾವ. ಎಕ್ಸ್ ರೆ ಆಗಬೇಕಂತ. ದೊಡ್ಡ ದವಾಖಾನಿಗೆ ತೋರಸಂದಾರ.. ಅದಕ್ಕ.."

"ಪ್ರವೀಣಾ, ಅವ್ವಗ ವಯಸ್ಸಾಗೇದ. ಅಲ್ಲದ  ಅರಾಮಾಗೋ ಜಡ್ಡಲ್ಲ ಅಕೀದು. ಅಲ್ಲೇ ಡಾಕ್ಟರ್ ಎಷ್ಟು ಕೊಡತಾರೋ ಅಷ್ಟರಾಗ ಬಗೀಹರಸರೀ..."

"ರಾತ್ರಿ ಇಡೀ ನರಳತಾಳ.. ಅದನ್ನು ನೋಡಲಾಸಲ್ಲಾ. ಡಾಕ್ಟರ್ ಒಂದು ಸರತೆ ಎಕ್ಸ್ ರೇ, ಒಂದೆರಡು ಬ್ಲಡ್ ಟೆಸ್ಟ್ ಆದ್ರ ಔಷಧ ಕೊಡಲಿಕ್ಕೆ ಅನುಕೂಲ ಆಗತದಂತಾರ. ಇಲ್ಲೇ ಹಾಸ್ಪಿಟಲ್ ದಾಗ ಒಂದೆರಡು ವಾರ ಎಡ್ಮಿಟ್ ಮಾಡಿದರೂ ಛೊಲೋ ಅಂತಾರ. ಜ್ವರಾ ಒಂದಿಷ್ಟು

ಕಂಟ್ರೋಲಿಗೆ ಬಂದರ ಎಲ್ಲಾ ಓಕೆ ಅಂತಾರ."

ಅಲ್ಲಿಯೇ ಇದ್ದು ಇವರ ಮಾತುಗಳನ್ನು ಕೇಳುತ್ತಿದ್ದ ದೀಪ್ತಿಗೆ ಒಮ್ಮೆಲೆ ಸಿಡಿಲು ಬಡಿದಂತಾಗಿತ್ತು. ಆ ಕಿರಿ ಕಿರಿಯ ಅತ್ತೆಯನ್ನು ತನಗೆ ಸಂಭಾಳಿಸಲಾದೀತೆ? ಹಾಸಿಗೆ ಹಿಡಿದರೂ ಅತ್ತೆ ತನ್ನ ಜೋರನ್ನು ಬಿಟ್ಟರಲಿಲ್ಲ. ಗಟ್ಟಿ ಇದ್ದಾಗಲೂ ಅವಳಿಗೆ ತನ್ನನ್ನು, ತನ್ನ ತಂದೆ ತಾಯಿಯರನ್ನು, ತಂಗಿಯನ್ನು, ತನ್ನ ಗೆಳತಿಯರನ್ನು ಟೀಕೆ ಮಾಡುವುದೇ ಒಂದು ಚಟ.

ಅದೇನು ಸೀರೀ ಉಟಗೋತೀ? ತೆಳ್ಳಗ ಉಳ್ಳೀ ಪರಿ ಆಗೇದ. ಝುಂಪರ ಯಾತಕ್ಕ ಹಾಕ್ಕೋತೀ? ತೋಳಿಲ್ಲಾ.. ಮುಂದ ಅರ್ಧಾ ಮರ್ಧಾ ಎಲ್ಲಾ ಕಾಣಸತಿರತದ. ಹಿಂದಂತೂ ಬೆನ್ನು ಪೂರಾ ತಗದಿರತದ..' ಮನೀ ಕೆಲಸಾನ ಇಲ್ಲಾ. ಯಾವಾಗ ನೋಡಿದ್ರೂ ಅದೊಂದು ತುಟೀ, ಮಾರೀ ಎಲ್ಲಾ ಬಣ್ಣಾ ಬಡಕೊಂಡು ಬ್ಯಾಗ ಏರಿಸಿಕೊಂಡು ಹೊಂಟ್ರ ಮುಗೀತು..ಹೊರಗಿಂದು ತಿನ್ನೋದು.. ಹೊರಗ ತಿರಗೋದು!', ನಿನಗರೆ ಏನ ಅನ್ನೋದು? ನಿಮ್ಮ ಅವ್ವನೂ ಹಂಗೇ ಇದ್ದಾಳ. ಅಕಿ ತನ್ನ ಮಕ್ಕಳಿಗೇನು ಛೊಲೋದ ಕಲಿಸ್ಯಾಳು?' ನಮ್ಮ ಪಕ್ಯಾ ಎಂಥಾ ದೊಡ್ಡ ಸಾಹೇಬಾ.. ಅವಾ ಕಲತದ್ದೂ ಇಂಜಿನೀರಗಿರಿ. ಬೇಕಾಧಂಗ ಕನ್ಯಾ ಸಿಗತಿದ್ವು.. ನಿನ್ನ ಕಂಡು ಮರುಳಾದಾ... ಹೀಗೆಲ್ಲ ಟೀಕಿಸುತ್ತಿದ್ದ ಅತ್ತೆಗೆ ನಾನೂ ನಿಮ್ಮ ಮಗನಷ್ಟೇ ಕಲತೇನಿ. ಅವನಿಗೆ ಕೆಲಸ ಕೊಟ್ಟದ್ದೇ ನಮ್ಮ ಅಪ್ಪಾ' ಎಂದೆಲ್ಲ ಹೇಳಬೇಕೆಂದುಕೊಂಡವಳಿಗೆ ಗಂಡ ಹೇಳಿದ ಶಾಂತಿಯ ಮಂತ್ರದ ನೆನಪಾಗಿ ಸುಮ್ಮನಾಗುತ್ತಿದ್ದಳು. ಪ್ರಕಾಶನು ನೀನು ನಿನಗೆ ಹೇಗೆ ಬೇಕೋ ಹಾಗಿರು. ಆದರೆ ಯಾರ ಬಾಯಿಗೂ ಹತ್ತುವುದು ಬೇಡ ಎಂದು ಹೇಳಿದ್ದನು. ಸೀನಿಯರ್ ಇಂಜಿನಿಯರ ಮಗಳಾದ ಅವಳು ಮದುವೆಯಾದ ಹೊಸತಿನಲ್ಲಿ ಒಂದೇ ಬಾರಿ ಹಳ್ಳಿಗೆ ಹೋಗಿದ್ದು ಅಷ್ಟೇ. ದೀಪ್ತಿಯು ಮತ್ತೆ ಹೋದದ್ದು ಪ್ರವೀಣನ ಮದುವೆಗೇ. ಆನಂತರ ಆಕೆ ಹಳ್ಳಿಗೆ ಕಾಲೇ ಇರಿಸಿರಲಿಲ್ಲ. ಶಹರದಲ್ಲಿಯೇ ಹುಟ್ಟಿ ಬೆಳೆದ ಆಕೆಗೆ ಹಳ್ಳಿಯ ಇರಸರಿಕೆಗಳು ಹೊಂದಾಣಿಕೆಯಾಗಲೇ ಇಲ್ಲ.

"ಭಾವಜೀ, ನಮಗ ಅತ್ಯಾನ್ನ ಇಲ್ಲೆ ಇಟಗೊಂಡ ಮಾಡ್ಲಿಕ್ಕೆ ಆಗಂಗಿಲ್ಲಾ. ನಮ್ಮ ಕ್ಲಬ್ಬಿಂದು ವಾರ್ಷಿಕೋತ್ಸವ ಬಂದದ. ನಾನ ಪ್ರೆಸಿಡೆಂಟಲಾ.. ಕೆಲಸಾ ಭಾಳವ. ಹುಡುಗೂರದೂ ಪರೀಕ್ಷಾ ಟೈಮು. ಇಂಜಿನಿಯರಿಂಗ್ ಕಡೀ ವರ್ಷಾ ಸನೀದು. ಅವಂದು ಅಭ್ಯಾಸ ಭಾಳಿರತದ. ಸೋನೀದೂ ದೊಡ್ಡ ಕ್ಲಾಸೂ.. ನಿಮ್ಮ ಅಣ್ಣಂತೂ ಆಫೀಸ್ ಮುಗಿಸ್ಕೊಂಡು ರಾತ್ರಿ ಅಡಹೊತ್ತಿನ್ಯಾಗ ಮನೀಗೆ ಬರತಾರ. ನನಗ ಒಬ್ಬಾಕಿಗೇ ಇದೆಲ್ಲಾ ಸಂಭಾಳಿಸೋದು ರಗಡಾಗತದ. ದವಾಖಾನಿ, ಜಡ್ಡಿನವರೂ ಅಂತ ಸಂಭಾಳಸಲಿಕ್ಕೆ ಆಗಂಗಿಲ್ಲಾ..."

"ನನ್ನ ಹೆಂಡ್ತಿಗೂ ಮನೀ ಕೆಲಸಾ. ಮ್ಯಾಲ ಹುಡುಗೂರದು, ಅವ್ವಂದು ಜವಾಬ್ದಾರಿ. ಈಗ ಬಿತ್ತನಿ ನಡದದ. ಕೂಲಿಯವರದೂ ಅಡಿಗೀ.. ಊಟಾ. ನಮ್ಮ ಕಡೇ ಕೆಲಸದವ್ರೂ ಸಿಗಂಗಿಲ್ಲಾ.. ಭಾಳ ತ್ರಾಸದ. ಆದರೂ ಹೆಂಗೋ ನಡದದ.. "

"ಎಲ್ಲಾರಿಗೂ ಅವರವರ ಅಡಚಣೀ ಇರತಾವ.. ಇವತ್ತು ನೀವು ಬಂದೀರಂತ ಲಗೂ ಬಂದಾರ... ನಾನ ಫೋನ್ ಮಾಡಿ ಹೇಳಿದ್ದೆ.. " ದೀಪ್ತಿ ಕಟುವಾಗಿ ಹೇಳಿ ಒಳಗೆ ಹೋಗಿದ್ದಳು. ಅಲ್ಲಿಗೆ ಅವಳಿಗೆ ಅವ್ವನ ಸೇವೆ ಮಾಡುವದರಲ್ಲಿ ಆಸಕ್ತಿ ಇಲ್ಲ ಎಂದಾಗಿತ್ತು.

"ಈಗ ಬಂದದ್ದೂ.."

ಪ್ರಕಾಶನಿಗೆ ಕಾರಣವಿಲ್ಲದೆ ಇವನು ಬರುವವನಲ್ಲವೆಂದು ಗೊತ್ತಿತ್ತು.

"ಅಣ್ಣಾ, ನನಗ ಇಪ್ಪತ್ತು ಸಾವಿರ ರೂಪಾಯಿ ಬೇಕಾಗಿತ್ತು.." ಪ್ರವೀಣ ಸಂಕೋಚದಿಂದ ಕೇಳಿದ್ದನು.

ಪ್ರಕಾಶನಿಗೆ ಅವನನ್ನು ನೋಡಿದಾಗಲೇ ಸಂಶಯ ಬಂದಿತ್ತು. ಆದರೂ ಅವನ ಬಾಯಿಂದಲೆ ಬರಲಿ ಎಂದು ಸುಮ್ಮನಿದ್ದ.

"ಅಲ್ಲೋ, ನಾ ನಿನ್ನ ಕಡೆ ಹೊಲದ್ದು, ತ್ವಾಟದ್ದು ಏನ ಬಂತೂ, ಏನ ಬಿಡ್ತೂಂತನೂ ಕೇಳಂಗಿಲ್ಲಾ.. ಸುಗ್ಗಿಯೊಳಗ ಕಾಳು ಕಡೀನೂ ನನಗ ನೀ ಕೊಡಬ್ಯಾಡಂತೇನಿ. ನಾಲ್ಕು ಕಾಯಿ, ಹಣ್ಣು ತೊಗೊಂಡ ಏನ ಮಾಡ್ಲೀ? ಇಲ್ಲೇ ಬಾಜಾರದಾಗ ಸಿಕ್ಕೇಸಿಗತಾವು.. "

"ಅದೆಲ್ಲಾ ಖರೆ. ಆದರ ಈ ಸರತೆ ಮಳೀನ ಹತ್ತೇದ. ಜ್ವಾಳಾ ಕೊಯ್ಲಿಗೆ ಬರೋಹೊತ್ತಿಗೆ ಹೊಲದಾಗ ಮೊಣಕಾಲಮಟಾ ನೀರು ನಿಂತ್ವೂ. ಜ್ವಾಳನೂ ಹಾಳಾತು.. ಈಗ ತ್ವಾಟದಾಗನೂ ಬಾಳಿಗಿಡಾ ಮಳೀಗೆ ನೆಲಸಮಾ ಆದವೂ. ಏನೂ ದಕ್ಕಲಿಲ್ಲಾ. ತೆಂಗಿನ ಕಾಯಿಗೆ ಒಳಗಿಂದೊಳಗನ ಬುರುಸು ಬರಲಿಕ್ಕತ್ತಾವು. ಮಳೀ ಬಂದರ ಹಚ್ಚಿ ಹೊಡದ ಹಾಳ ಮಾಡತದ. ಬರಲಿಲ್ಲಾಂದ್ರ ಭೂಮಿ ಬಾಯಿಬಿಡೋವಷ್ಟು ಅನಾವೃಷ್ಟಿ. ಸಾಕಾಗೇದಪಾ... ಮ್ಯಾಲ ಅವ್ವನ ಜಡ್ಡು. ಇಕೀಗಂತೂ ಹಗಲು ಮನಿಕೆಲಸಾ, ರಾತ್ರಿ ಅವ್ವನ ಉಸಾಬರಿ. ಅದನ್ನೂ ಹೆಂಗರೆ ಸಂಭಾಳಿಸೇವು. ಅವ್ವನ ಜಡ್ಡಿಗೂ ರಗಡ ಖರ್ಚು ಆಗಲಿಕ್ಕತ್ತೇದ. ಕೈಯಾಗಿನ ರೊಕ್ಕೆಲ್ಲಾ ಮುಗದಾವ. ಎಲ್ಲೆಲ್ಲಿ ಸಾಲ ಸಿಗತದೋ ಅಲ್ಲೆಲ್ಲಾ ಮಾಡಿದೆ. ಈಗ ಅವ್ವನ್ನ ದೊಡ್ಡ ದವಾಖಾನಿಗೆ ಕರಕೊಂಡ ಹೋಗಬೇಕಂದ್ರ ರೊಕ್ಕಾ ಬೇಕೂ. ಬಿತ್ತನೀಗೆ ಕಾಳ ಬೇಕು.. ಅಂಥಾದರಾಗ ಅನಿಕೇತಂದು ಎಂಜಿನಿಯರಿಂಗ್ ಎಡ್ಮಿಶನ್ ಬಂದದ. ಛೊಲೋ ಮಾರ್ಕ್ಸ್ ತೊಗೊಂಡಾನ. ಸರಕಾರದ ಸೀಟೂ ಸಿಕ್ಕದ. ಮಿನಿಮಮ್ ಫೀ ತುಂಬಬೇಕಲಾ.. ಅದಕ್ಕಂತ ಬಂದೆ.."

"ನಾನರೆ ಏನ ಮಾಡ್ಲೆಪಾ.. ನಾವು ನೌಕರದಾರರು.. ನೋಡವ್ರಿಗೆ ನಮಗೇನು ಕಡಿಮಿ ಅಂತನಸತದ. ಆದರ ತಿಂಗಳ ಪಗಾರ ಬರೋದರಾಗನ ಏನೇನೋ ಖರ್ಚು ಆ ಅಂತ ಬಾಯಿ ತಕ್ಕೊಂಡ ಕೂತಿರತಾವ. ನಮ್ಮಾವಂದೂ ಪೋಸ್ಟ್ ಗ್ರಾಜುಯೇಶನ್ ಗದ್ದಲ ಸುರೂ ಆಗೇದ. ಅವಂದೂ ಫೀ ತುಂಬಬೇಕು. ಸೋನೀದೂ ಎರಡನೇ ವರ್ಷ ಪಿಯುಸಿ ಸುರುವಾಗೇದ. ಟ್ಯೂಶನ್ ಕ್ಲಾಸಿಂದು ರೊಕ್ಕಾ ತುಂಬಬೇಕು.. ಮನೀ ಖರ್ಚೂ ಇರತದ.."

"ಆದರೂ ಅನೀದು ಫೀ ತುಂಬೋದು ಕುತಿಗೀಗೆ ಬಂದದ. ಇದೊಂದು ಸರೆ.."

"ನೋಡಪಾ, ನಾಳೆ ಮಗಗ ದೊಡ್ಡ ಪಗಾರ ಆದ್ರ ಸುಖಾ ಉಣ್ಣಾವಾ ನೀ... ಈಗ ಕಷ್ಟನೂ ನೀನ ಪಡಬೇಕ ಮತ್ತ..."

'ನಿನಗೂ ನಾನೇ ಇಂಜಿನಿಯರಿಂಗ್ ಮುಗಿಯೋ ತನಕಾ ನಾಲ್ಕು ವರ್ಷ ಕಾಲೇಜು ಫೀ ತುಂಬಿದೆನಲ್ಲೋ.. ನೀ ಕಲೀಲಿ ಅಂತ ನಾ ಬರೇ ಪಿಯುಸಿ ಗೇ ಕಲಿಯೋದಬಿಟ್ಟು ಹೊಲದ ಕೆಲಸಕ್ಕ ಹತ್ತಿದೆ. ನೀ ಎಷ್ಟು ಕೊಟ್ಟೀ ನನಗ? ನಂದಬಿಡು, ಹಡದ ಅವ್ವನ್ನ ಈಗ ಸಾಯಲಿಕ್ಕೆ ಬಿಡು ಅಂತೀ. ನಾಳೆ ನಿನಗೂ ಮಕ್ಕಳು ಹಿಂಗನ ಅಂದ್ರ? ಇದೇ ಗತಿ ಬಂದರ? ಅವ್ವಾ.. ಅಕೀ ಹೋದ ಮ್ಯಾಲ ಸಿಗತಾಳೇನು? ನಿಮ್ಮ ಮನೀ ನಾಯಿಗೆ ಏನರೆ ಹೆಚ್ಚು ಕಡಿಮೀ ಆದರ ಪಟ್ಟನ ದವಾಖಾನಿಗೆ ಕರಕೊಂಡ ಹಚಿಗೋ ನಿಮಗ ಅವ್ವನ ಬಗ್ಗೆ ನಾಯಿ ಬಗ್ಗೆ ಇರೋವಷ್ಟು ಕಾಳಜೀನೂ ಇಲ್ಲೇನು? ಅಕೀ ನನಗೊಬ್ಬಾತಗನ ಅವ್ವೇನು? ನಿನಗೂ ಅವ್ವನ ಅಲ್ಲೇನು? ನೀನು, ನಿನ್ನ ಹೆಂಡತಿ ಜಾಡಿಸಿಕೊಂಡ್ರೀ ಅಂತ ನಂಗ ಜಾಡಿಸ್ಕೊಳ್ಳಿಕ್ಕೆ ಆಗಂಗಿಲ್ಲಾ...'

ಪ್ರವೀಣನು ಮನದಲ್ಲೇ ಆಲೋಚಿಸುತ್ತ ಕೈಚೀಲವನ್ನು ಎತ್ತಿಕೊಂಡು ಹೊರಟಿದ್ದ.. ಪ್ರಕಾಶನಿಗೆ ಏನೆನ್ನಿಸಿತೋ, ? ಪ್ರವೀಣ, ಊಟಾ ಮಾಡಿಕೊಂಡು ಹೋಗೋ.. ಊಟ ಆಗಿರಲಿಕ್ಕಿಲ್ಲಾ..' ಎಂದಿದ್ದ.


ಇಲ್ಲಪಾ.. ಈಗ ಹೋದ್ರ ಕಡೀ ಬಸ್ಸು ಸಿಗತದ. ರಾತ್ರಿ ಆಗೋದರಾಗನ ಊರು ಮುಟ್ಟಿ ಬಿಡತೇನಿ.. ಅವಲಕ್ಕಿ ತಿಂದೇನಲಾ..ಹೊಟ್ಟೀ ತುಂಬೇದ..' ಎನ್ನುತ್ತ ಚಪ್ಪಲಿ ಮೆಟ್ಟಿ ಹೋಗಿದ್ದ. ಪ್ರಕಾಶನು ಅವನ ಬೆನ್ನನ್ನೇ ನೋಡುತ್ತ ನಿಟ್ಟುಸಿರು ಬಿಟ್ಟಿದ್ದ. ಶ್ರೀಮಂತರ ಮಗಳನ್ನು ಮದುವೆಯಾಗಿ ತಾನು ಪಂಜರದಲ್ಲಿ ಸಿಕ್ಕಿಬಿದ್ದ ಗಿಳಿಯಂತಾಗಿರುವೆ ಎಂದು ಅವನ ಮನಸ್ಸು ಅತ್ತಿತ್ತು. ಹಡೆದ ತಾಯಿಯ ಋಣ, ಬೆನ್ನಿಗೆ ಬಿದ್ದ ತಮ್ಮನ ಋಣ ಎರಡೂ ಅವನನ್ನು ಅದರಿಂದ ಮೇಲೇಳದಂತೆ ಕಾಡಿದ್ದವು.. ●

## ದೇಹದಲ್ಲಿ ಪ್ರಾಣದ ಶ್ರೇಷ್ಠತೆ

ಆದರೆ ನಾನು ಈ ಮಾತನ್ನು ಇವರಿಗೆ ನೇರವಾಗಿ ಹೇಳಿಬಿಟ್ಟರೆ, ಈ ಜಗಳ ಇಲ್ಲಿಗೆ ಬಗೆಹರಿಯೋದಿಲ್ಲ. ಇದನ್ನು ರುಜುವಾತು ಪಡಿಸಿದಾಗ ಮಾತ್ರ ಇವರೆಲ್ಲರು ತೆಪ್ಪಗಾಗುತ್ತಾರೆ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾ, ಎಲೈ ಪ್ರಾಣದೇವತೆ, ನಿಮ್ಮಲ್ಲಿ ಒಬ್ಬೊಬ್ಬರೂ ಅನುಕ್ರಮವಾಗಿ ಈ ದೇಹವನ್ನು ಬಿಟ್ಟು ಒಂದು ವರ್ಷಕಾಲ ಹೊರಗೆ ಹೋಗಿರಿ. ಆಗ ನಿಮ್ಮಲ್ಲಿ ಯಾರು ಶ್ರೇಷ್ಠರೆಂಬುದು ತಾನಾಗಿಯೇ ತಿಳಿದು ಬರುತ್ತದೆ" ಎಂದು ಆದೇಶವನ್ನಿತ್ತನು. ಆಗ ವಾಗಿಂದ್ರೀಯವು ಮುಂದೆ ಬಂದು "ಆಗಲಿ, ನಾನು ಈ ಮನುಷ್ಯ ದೇಹವನ್ನು ಬಿಟ್ಟು ಒಂದು ವರ್ಷಕಾಲ ಹೊರಗೆ ಹೋಗಿ ಬರುತ್ತೇನೆ ಎಂದು ಹೇಳಿ ಬಿಂಕದಿಂದ ಹೊರಟು ಹೋಯಿತು. ಒಂದು ವರ್ಷದ ಕಳೆಯಿತು. ವಾಗಿಂದ್ರೀಯವು ವಾಪಾಸು ಬಂದು ನೋಡಿದಾಗ, ಅವರೆಲ್ಲರೂ ಹಿಂದಿನಂತೆಯೇ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಸುಖವಾಗಿದ್ದರು. 'ನಾನಿಲ್ಲದಿದ್ದರೂ ನೀವು ಹೇಗೆ ಬದುಕಿ ಉಳಿದಿದ್ದೀರಿ? ಎಂದು ಕೇಳಿತು. ಹೇಗೆ ಮೂಕರು ಬದುಕುತ್ತಾರೋ ಹಾಗೆ ಬದುಕಿದ್ದೇವೆ ಎಂದು ನುಡಿದವು ಇತರ ಇಂದ್ರೀಯಗಳು. ತಾನು ಶ್ರೇಷ್ಠನಲ್ಲವೆಂದು ವಾಗಿಂದ್ರಿಯಕ್ಕೆ ಮನವರಿಕೆಯಾಯಿತು. ತೆಪ್ಪಗೆ ದೇಹವನ್ನು ಪ್ರವೇಶಿಸಿ ಕುಳಿತುಕೊಂಡಿತು. ಆಮೇಲೆ ಚಕ್ಷುರಿಂದ್ರಿಯವು ಹೊರಟು ಹೋಯಿತು. ಒಂದು ವರ್ಷದ ಮೇಲೆ ಬಂದು ನೋಡಿದಾಗ, ದೇಹವ್ಯಾಪಾರವು ಎಂದಿನಂತೆ ನಡೆಯುತ್ತಿರುವುದನ್ನು ನೋಡಿತು. ಕುರುಡರು ಕಣ್ಣಿಲ್ಲದಿದ್ದರೂ ಬದುಕಬಲ್ಲರು ಎಂಬುದರ ಅರಿವಾಯಿತು. ಅನಂತರ ಶ್ರೋತ್ರೇಂದ್ರಿಯವು ಹೊರಟು ಹೋಯಿತು. ಒಂದು ವರ್ಷದ ನಂತರ ಬಂದು ನೋಡಿದಾಗ, ದೇಹವ್ಯಾಪಾರ ಎಂದಿನಂತೆಯೇ ನಡೆಯುತ್ತಿರುವುದನ್ನು ನೋಡಿ, ಕಿವುಡರು ಬದುಕಬಲ್ಲರು. ನನ್ನ ಶ್ರೇಷ್ಠತೆ ಏನೂ ಇಲ್ಲ ಆಂದುಕೊಂಡಿತು. ತರುವಾಯ ಮನಸ್ಸು ಒಂದು ವರ್ಷಕಾಲಗಳಿಗಾಗಿ ಹೊರಟು ಹೋಯಿತು. ಬುದ್ದಿ ಇಲ್ಲದೆ ನೀವೆಲ್ಲ ಉಳಿಯಲು ಸಾಧ್ಯವೇ ಇಲ್ಲ ಎಂದು ಯೋಚಿಸುತ್ತಾ ವಾಪಾಸು ಬಂದಾಗ, ದೇಹ ವ್ಯಾಪಾರವು ಯಾವ ಅಡೆತಡೆಗಳಿಲ್ಲದೆ ಸಾಂಗವಾಗಿ ನಡೆಯುತ್ತಿರುವುದನ್ನು ಕಂಡು ಬೆರಗಾಗಿ, ನೀವೆಲ್ಲ ಹೇಗೆ ಬದುಕಿ ಉಳಿದಿದ್ದೀರಿ' ಎಂದು ಪ್ರಶ್ನಿಸಿತು. ಯಾಕೆ ಬುದ್ದಿಯಿಲ್ಲದ ಚಿಕ್ಕಮಕ್ಕಳು ಜೀವಿಸುತ್ತಿಲ್ಲವೇ? ಎಂದವು ಇತರ ಇಂದ್ರೀಯಗಳು. ಅನಂತರ ಪ್ರಾಣವಾಯುವಿನ ಸರದಿ ಬಂದಿತು. "ನಿಮ್ಮೆಲ್ಲರ ಶ್ರೇಷ್ಠತೆಯನ್ನು ಪರೀಕ್ಷೆ ಮಾಡಿದ್ದಾಯಿತು. ಈಗ ನಾನು ಹೊರಡುತ್ತೇನೆ ಎಂದು ನುಡಿದು ಹೊರಡಲು ಸಜ್ಜಾಯಿತು. ಪ್ರಾಣವು ಸ್ವಲ್ಪ ಚಲಿಸಿದೊಡನೆಯೇ ಇತರ ಇಂದ್ರೀಯಗಳ ಬುಡವೇ ಅಲ್ಲಾಡಿ ಹೋಯಿತು. ಅವು ತಮ್ಮ ಸ್ಥಳದಲ್ಲಿರಲಾರದೆ ತತ್ತರಿಸಿದವು. ಎಲ್ಲ ಇಂದ್ರೀಯಗಳು ಒಕ್ಕೊರಲಿನಿಂದ, "ಓ ಪ್ರಾಣದೇವತೆ, ದಮ್ಮಯ್ಯ ನೀನು ಹೋಗಬೇಡ, ನೀನೇ ಶ್ರೇಷ್ಠ ನೀನೇ ಶ್ರೇಷ್ಠ, ನೀನು ಶ್ರೇಷ್ಠನೆಂಬುದು ರುಜುವಾತಾಯಿತು. ನಿನ್ನಿಂದಲೇ ಈ ದೇಹದಲ್ಲಿರಲು ನಮಗೆ ಶಕ್ತಿ ಬಂದಿದೆ" ಎಂದು ಅರಚಿಕೊಂಡವು.

ಹೀಗೆ ಪ್ರಾಣವು ಮುಖ್ಯವಾದ್ದರಿಂದ ಅದಕ್ಕೆ ಮುಖ್ಯಪ್ರಾಣವೆಂದು ಹೆಸರು ಬಂದಿದೆ. ಅದರ ಉಪಾಸನೆಯಿಂದ ಮನುಷ್ಯನ ಎಲ್ಲ ಕಾಮನೆಗಳೂ ಸಿದ್ಧಿಸುತ್ತದೆ ಎನ್ನುವ ಪ್ರತೀತಿಯಿದೆ. ಹಾಗಾಗಿ ಪ್ರಾಣವಾಯು ಹೊರಟು ಹೋಗುವ ಮುನ್ನ, ಸತ್ಕರ್ಮಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳೋಣ. ●


# ಗೊರೂರು ರಾಮಸ್ವಾಮಿ ಐಯಂಗಾರ್ ಅವರ ಮರೆಯಲಾಗದ ಕೃತಿ – ನಮ್ಮ ಊರಿನ ರಸಿಕರು.



ಶ್ರೀಧರ (ಬಾಣಾವರ)

50ರ ದಶಕದಲ್ಲಿ ನನ್ನಕ್ಕನಿಗೆ ಎಸ್ ಎಸ್ ಎಲ್ ಸಿ ಯಲ್ಲಿ ಉಪಪಠ್ಯವಾಗಿದ್ದ ಪುಸ್ತಕ ನಮ್ಮ ಊರಿನ ರಸಿಕರು ನಮ್ಮ ಮನೆ ಸೇರಿತ್ತು . ಕೆನಿಲ್ವರ್ತ್ ಎಂಬ ಅನುವಾದ ಕೃತಿ, ಅಳಸಿಂಗಾಚಾರ್ಯರ ರಾಮಾಯಣದ ಪ್ರತಿಗಳು, ವೀಣಾರಹಸ್ಯ ಅಥವಾ ಸಂಧ್ಯಾವಂದನೆಯ ತಾತ್ಪರ್ಯ ಮುಂತಾದ ಕೆಲವೇ ಕೆಲವು ಪುಸ್ತಕಗಳು ನಮ್ಮ ಮನೆಯಲ್ಲಿದ್ದವು. ಆರೇಳರ ಬಾಲಕನಾಗಿದ್ದ ನನಗೆ ಓದಬಹುದಾಗಿದ್ದ ಪುಸ್ತಕವೆಂದರೆ ನಮ್ಮ ಊರಿನ ರಸಿಕರು ಒಂದೇ. ಅಂದಿನಿಂದ ಆರಂಭಿಸಿ ಇಂದಿನವರೆಗೆ ನೂರಾರು ಸಾರಿ –ಖಂಡಿತಾ ಉತ್ಪ್ರೇಕ್ಷೆಯಲ್ಲ–ಓದಿರುವ ಪುಸ್ತಕ ನಮ್ಮ ಊರಿನ ರಸಿಕರು ಮಾತ್ರಾ. ನಂತರದಲ್ಲಿ ಇವರ ಅನೇಕ ಪುಸ್ತಕಗಳನ್ನು ಓದಲು ಇದು ಪ್ರೇರೇಪಿಸಿದೆ.

ಗೊರೂರರ ಮುಂಚಿನ "ಕೃತಿ ಹಳ್ಳಿಯ ಚಿತ್ರಗಳು" ಗೆ ದೊರಕಿದ ಉತ್ತೇಜನದಿಂದ ಬರೆದ ಕೃತಿಯಂತೆ, ನಮ್ಮ ಊರಿನ ರಸಿಕರು. ಇದರ ರಂಗ ಪ್ರವೇಶ ಹೆಚ್ಚಾಗಿ ಹಿರಿಯರ ಆಶೀರ್ವಾದ ಪೂರ್ವಕವಾಗಿ ಆಯಿತು ಎಂದು ಲೇಖಕರು ಹೇಳಿಕೊಂಡಿದ್ದಾರೆ. ಹಸ್ತಪ್ರತಿಯಲ್ಲಿ ಅದರ ಮೊದಲ ವಾಚನ ಮಾಸ್ತಿಯವರ ಮನೆಯಲ್ಲಿ ಆಯಿತಂತೆ. 40 ಜನ ವಿದ್ವಾಂಸರು, ಹಿತೈಷಿಗಳು ಭಾಗವಹಿಸಿದ್ದರಂತೆ. ಬಿ ಎಂ ಶ್ರೀ, ತೀ ನಂ ಶ್ರೀ, ದೇಜಗೌ, ಪುತಿನ ಎಲ್ಲರೂ ಸಭೆಯಲ್ಲಿದ್ದರಂತೆ. ಈ ಎಲ್ಲರ ಉತ್ತೇಜನದಿಂದ ಈ ಕೃತಿ ಮುದ್ರಣ ರೂಪದಲ್ಲಿ ಹೊರಬಂದಿತಂತೆ. ಈ ಕೃತಿಗೆ ಡಿ ವಿ ಜಿಯವರು ಮಹತ್ವ ಪೂರ್ಣ ಮುನ್ನುಡಿಯನ್ನು ಬರೆದಿದ್ದಾರೆ.




ಹಾಸನ ಜಿಲ್ಲೆಯ ಒಂದು ಸಣ್ಣ ಗ್ರಾಮ ಗೊರೂರು. ಹೇಮಾವತಿಯ ದಡದಲ್ಲಿನ ಈ ಗ್ರಾಮದಲ್ಲಿ ಎಲ್ಲ ಜಾತಿ ಪಂಗಡಗಳ, ವಿವಿಧ ಕಸುಬಿನ ಜನರಿದ್ದಾರೆ. ಅನಕ್ಷರಸ್ಥರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅಲ್ಪ ಸ್ವಲ್ಪ ಓದಿದವರು, ಕಾಲೇಜು ಕಲಿತವರು, ರಾಮಾಯಣ ಮಹಾಭಾರತ ಅರಿತ ಜ್ಞಾನಿಗಳೂ ಇಲ್ಲಿದ್ದಾರೆ. ಇಲ್ಲಿ ಹುಟ್ಟಿ ಬೆಳೆದ ಗೊರೂರರಿಗೆ ಲಭ್ಯವಾದದ್ದು ಹೈಸ್ಕೂಲ್ ವರೆಗಿನ ವಿದ್ಯಾಭ್ಯಾಸ ಮಾತ್ರ. ಇವರು ತಮ್ಮ 14–15 ನೆಯ ವಯಸ್ಸಿಗೇ ಗಾಂಧಿಯವರಿಂದ ಪ್ರೇರೇಪಿತರಾಗಿ ಸ್ವಾತಂತ್ರ ಚಳುವಳಿಗೆ ಧುಮುಕಿದ್ದರಿಂದ ತಮ್ಮ ಹಳ್ಳಿಯ ಜೀವನ, ಜಾನಪದ ಸಾಹಿತ್ಯ, ಗಾಂಧಿಯವರ ಒಡನಾಟ, ಅವರ ತತ್ವಗಳು, ಖಾದಿ ಚಳುವಳಿ, ಇವೇ ಅವರ ಕಾಲೇಜು, ವಿಶ್ವವಿದ್ಯಾಲಯಗಳಾದುವು. ತಮ್ಮ ಜೀವನದಿಂದ ಕಲಿತ ಪಾಠಗಳನ್ನು, ಸರಳ ಸ್ವಾರಸ್ಯಕರ ಪ್ರಬಂಧಗಳು, ಜೀವನ ಚರಿತ್ರೆಗಳು, ವೈಚಾರಿಕ ಲೇಖನಗಳು, ಜಾನಪದ ಸಂಗ್ರಹ–ವಿಶ್ಲೇಷಣೆ ಯ ಕೃತಿಗಳನ್ನು ರಚಿಸುವುದರಲ್ಲಿ ಬಳಸಿಕೊಂಡು ವಿಶಿಷ್ಟ ಸಾಹಿತಿಯಾಗಿ ಹೊರಹೊಮ್ಮಿದರು. ಹಳ್ಳಿಯ ಜೀವನದ ಬಗ್ಗೆ ಅನೇಕ ಕೃತಿಗಳು ಇವರಿಂದ ರಚಿತವಾಗಿವೆ. ಅದರಲ್ಲಿ ನಮ್ಮ ಊರಿನ ರಸಿಕರು ಕೃತಿ ಅತ್ಯಂತ ಜನಪ್ರಿಯ. ಇದರ ಬಗ್ಗೆ ಒಂದು ಸ್ವಾರಸ್ಯಕರ ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕು. ಕನ್ನಡ ಪಂಡಿತರ ಹುದ್ದೆ ಪಡೆಯುವ ಸಲುವಾಗಿ ಇವರು ಕನ್ನಡ ಪಂಡಿತ ಪರೀಕ್ಷೆ ಬರೆಯಬೇಕಾಗಿ ಬರುತ್ತೆ. ಅನೇಕ ಕನ್ನಡ ಕೃತಿಗಳನ್ನು ಇವರು ಅಭ್ಯಸಿಸಬೇಕಾಗುತ್ತದೆ. ಅದರಲ್ಲೊಂದು ಅಷ್ಟರೊಳಗಾಗಲೇ ಜನಪ್ರಿಯವಾಗಿದ್ದ ಇವರದೇ ಕೃತಿ ನಮ್ಮ ಊರಿನ ರಸಿಕರು. ಈ ರೀತಿಯ ಪರಿಸ್ಥಿತಿ ನಮ್ಮ ಕನ್ನಡದ ಅನೇಕ ಲೇಖಕರಿಗೆ ಒದಗಿ ಬಂದಿರುವ ಉದಾಹರಣೆಗಳಿವೆ. ತಮ್ಮದೇ ಪುಸ್ತಕದ ಬಗ್ಗೆ ಬಂದ ಪ್ರಶ್ನೆಗಳಿಗೆ ಚನ್ನಾಗಿಯೇ ಉತ್ತರಿಸಿರುವುದು ಸಹಜ. ಆದರೆ ಪರೀಕ್ಷಕರಾಗಿದ್ದ ಕನ್ನಡ ವಿದ್ವಾಂಸ ಮುಳಿಯ ತಿಮ್ಮಪ್ಪಯ್ಯನವರ ನಿರೀಕ್ಷೆಗೆ ಇದು ಸಾಕಾಗಿರಲಿಲ್ಲವೇನೋ? ಮುಂದೆ ಅವರು ಗೊರೂರರನ್ನು ಕಂಡಾಗ " ಏನ್ರೀ, ನೀವೇ ಬರದ ಪುಸ್ತಕ ಅದು. ಇನ್ನೂ ಚನ್ನಾಗಿ ಓದಿಕೊಂಡು ಬಂದು ಉತ್ತರ ಬರಯಬಾರದಿತ್ತೇನ್ರೀ? ನಿಮಗೆ ಕೊಟ್ಟ ಅಂಕ ಹೆಚ್ಚಾಯಿತು, ಇನ್ನೂ ಕಡಿಮೆ ಕೊಡಬೇಕಾಗಿತ್ತು" ಎಂದರಂತೆ.

ಈ ಕೃತಿಯ ಬಗ್ಗೆ ಹೇಳುವುದಾದರೆ ಇಲ್ಲಿನ ದಿನನಿತ್ಯದ ಜನಜೀವನ, ಊರಿನ ಪ್ರಕೃತಿ ಸೌಂದರ್ಯ, ಕಾಲಾಂತರದಲ್ಲಿ ನಡೆದ ಅನೇಕ ಪ್ರಸಂಗಗಳ ವರ್ಣನೆಗಳ ನಿರೂಪಣೆ ವಿಶಿಷ್ಠವಾದ ಗೊರೂರರ ಲೇಖನಿಯಲ್ಲಷ್ಟೇ ಸಾಧ್ಯ. ಅದರಲ್ಲೂ ಇಲ್ಲಿನ ಸಾಧಾರಣರಲ್ಲಿ ಅಸಾಧಾರಣರಾದ ಜನಪದ. ಶಾಲುಸಾಬಿ, ಜೋಡಿದಾರರು, ಶೀನಪ್ಪ, ರಂಗೇಗೌಡ, ಗುಂಡ, ಮಣೆಗಾರರು, ಅತಂತ್ರ ವಿಧವೆಯರು ಇವರೇ ಪಾತ್ರಧಾರಿಗಳು.

ತಮ್ಮೂರಿನ ಜನಗಳ ಬಗ್ಗೆ ಗೊರೂರರೇ ಹೀಗೆ ಹೇಳುತ್ತಾರೆ: "ನಮ್ಮ ಊರಿನವರೆಲ್ಲಾ ಬಹಳ ರಸಿಕರು. ಅಲ್ಲಿ ವಿನೋದಪ್ರಿಯರಲ್ಲದವರು ಯಾರೂ ಸಿಕ್ಕುವುದಿಲ್ಲ. ಕೋಪಿಷ್ಠರಾಗಲೀ ಮುಖವನ್ನು ಗಂಟು ಹಾಕಿಕೊಳ್ಳುವವರಾಗಲಿ ಅಲ್ಲಿಗೆ ಬಂದರೆ ಕೂಡಲೇ ಮಾಯವಾಗಿ ಬಿಡುತ್ತಾರೆ ಅಥವಾ ಮುಂಗೋಪ ಬಿಟ್ಟು ಎಲ್ಲರಂತೆ ತಾವೂ ನಗಲು ಪ್ರಾರಂಭಿಸುತ್ತಾರೆ"

ಇಲ್ಲಿ ಬರುವ ಒಂದು ಪಾತ್ರ ಸೀನಪ್ಪ, ಇಡೀ ಹಳ್ಳಿಯ ಯಜಮಾನನಂತೆ ಕಾಣಿಸಿಕೊಳ್ಳುತ್ತಾನೆ. ಅವನು ಪ್ರವೇಶಿಸದ ಮನೆ ಇಲ್ಲ. ಹೋಗದ ಜಾಗವಿಲ್ಲ, ತಲೆಹಾಕದ ಪ್ರಸಂಗವಿಲ್ಲ. ಅವನಿಲ್ಲದೆ ಮದುವೆ ಮುಂಜಿ ನಡೆಯುವಂತಿಲ್ಲ. ಸ್ಮಶಾನ ಕಾರ್ಯ ಮುಗಿಯುವಂತಿಲ್ಲ. ಕೊನೆಗೆ ಅವನು ಸತ್ತ ಎಮ್ಮೆಯನ್ನೂ ಹೊತ್ತವನು. ಅವನು ವಿನೋದಕ್ಕೂ ಸರಿ, ರಾಜಿ ಮಾಡುವುದಕ್ಕೂ ಸರಿ. ಅವನ ತುಂಟತನವನ್ನು ಎಲ್ಲರೂ ಅರ್ಥಮಾಡಿಕೊಂಡಿರುವುದರಿಂದ ಯಾರಿಗೂ ಅವನ ಮೇಲೆ ಕೋಪವೇ ಬರುವುದಿಲ್ಲ.

ಹಳ್ಳಿಯ ರೈತರ ಮನೆಯ ಸಮಾರಂಭದ ಊಟ ಒಂದರಲ್ಲಿ ಆದ ಪೇಚಿನ ಪ್ರಸಂಗವೊಂದನ್ನಂತೂ ಓದುಗ ಮರೆಯಲು ಸಾಧ್ಯವೇ ಇಲ್ಲ. ರಂಗೇಗೌಡ ತನ್ನ ಮದುವೆ ಸಂದರ್ಭದಲ್ಲಿ ಊರಿಗೆಲ್ಲ ಸೊಗಸಾದ ಊಟ ಹಾಕಿಸುವ ಯೋಚನೆ ಮಾಡುತ್ತಾನೆ. ಚೆನ್ನಾದ ಊಟವೆಂದರೆ ಹಿಟ್ಟು ಅನ್ನ , ಎಸರು(ಸಾರು) ಪಾಯಸ ಇತ್ಯಾದಿ. ಅಲ್ಲಿ ಕಾರದ ಎಸರಿಗೆ ಎಣ್ಣೆ ಬಿಡುವುದು ಪದ್ದತಿ. ಹೀಗೆ ಎಣ್ಣೆ ಬಿಡುವುದರ ಮೇಲೆ ಅವನ ಐಶ್ವರ್ಯ ನಿರ್ಧಾರವಾಗುತ್ತದೆ. ಎಣ್ಣೆ ಬಿಡುವುದು ಚಮಚ, ಸೌಟಿನಲ್ಲಿ ಅಲ್ಲ. ಬೆರಳಿನಲ್ಲಿ. ಒಂದು ಬೆರಳು ತೀರಾ ಬಡತನ, ಎರಡು ಮಧ್ಯಮ, ಮೂರು ಬೆರಳಲ್ಲಿ ಎಣ್ಣೆ ಬಿಡುವವ ಧನಿಕ . ಅದು ಹಳ್ಳಿಯವರ ಬಾಯಲ್ಲಿ ಮೂರು ಬೆಟ್ಟು ಎಣ್ಣೆ ಬಿಟ್ಟು ಗಣಾರಾಧನೆ ಮಾಡಿದ, ಅವನಿಗೇನು ಕಡಿಮೆ? ಎಂದಾಗಿ ಹೊಮ್ಮುತ್ತದೆ. ಇಂತಹ ಒಂದು ಸಂದರ್ಭ, ನಾಲ್ಕು ಖಂಡುಗ ರಾಗಿ ಅಕ್ಕಿಯ ಖರ್ಚು. ಸೀನಪ್ಪನ ನೇತೃತ್ವದಲ್ಲಿ ರಂಗೇಗೌಡನ ಮದುವೆಯಲ್ಲಿ ರಂಗೇಗೌಡನ ಬಯಕೆಯಂತೆ ಬ್ರಾಂಬ ಎಸರು ತಯಾರಾಗಿದೆ. ಊಟಕ್ಕೆ ಕುಳಿತವರೆಲ್ಲರಿಗೂ ಮೊದಲ ಪಂಕ್ತಿಯಲ್ಲಿ ನಾಲ್ಕು ನಾಲ್ಕು ಮುದ್ದೆ ಒಂದೊಂದು ಮೇಕೆ ಹಾರುವಷ್ಟು ಅನ್ನ ಬಡಿಸಿದ್ದಾಗಿದೆ. ಎಲ್ರೂ ಮಾಡಿದ ಎಸರನ್ನು ಪಾಯಸದಂತೆ ಕುಡಿಯ ತೊಡಗಿದರು. ಎಲ್ಲರೂ ಹೊಟ್ಟೆ ತುಂಬಿದರೂ ಇನ್ನೂ ಎಸರು ತತ್ತಾ ಅನ್ನುವವರೆ. ಮುಂದಿನವರಿಗೆ ಏನೂ ಉಳಿಯುವ ಲಕ್ಷಣ ಕಾಣದಾದಾಗ ರಂಗೇಗೌಡನ ಚಿಕ್ಕಪ್ಪ ಎರಡು ಅಡ್ಡೇಲಿ ನಾಲ್ಕು ಬಿಂದಿಗೆ ನೀರು ತರಿಸಿ ಎಸರಿಗೆ ಮದುವೆ ಮಾಡಿಸುತ್ತಾನೆ. ರಂಗೇಗೌಡನಿಗೂ ರುಚಿನೋಡಲು ಎಸರು ಸಿಗುವುದಿಲ್ಲ.

ಇನ್ನು ಹಳ್ಳಿಯ ಹೆಂಗಸರು ರಾತ್ರಿ ಬೇಕೆಂದು ಹೆಚ್ಚಾಗಿಯೇ ಮಾಡಿ ಉಳಿಸಿದ ರಾಗಿ ಮುದ್ದೆಯಲ್ಲಿ ಬೆಳಿಗ್ಗೆ ಬೇಗನೇ ಹೊಲಗದ್ದೆಗಳಿಗೆ ಹೋಗುವ ಗಂಡಾಳುಗಳಿಗೆ ಬಿಸಿ ಬಿಸಿ ಉಪ್ಪಿಟ್ಟು ತಯಾರಿಸುವ ರೆಸಿಪಿಯನ್ನು ಸಹ ಗೊರೂರರು ಈ ಕೃತಿಯಲ್ಲಿ ಕೊಟ್ಟಿದ್ದಾರೆ.

ಇನ್ನು ಊರಿನ ಜನರ ಬರಹಗಳ ಹಲವು ಉದಾಹರಣೆಗಳನ್ನು ನೋಡೋಣ ' ಶಂಖಪುರದ ನರಸಿಂಹ ಜೋಯಿಸರ ರುಜು' ಎಂದು ಬರೆಯಬೇಕಾದ ಕಡೆ ಗಾಬರಿಯಲ್ಲಿ ಜೋಯಿಸರು ಪಂಕಜ ಶರೋಜಿನಿ ಸಖಿ ಎಂದು ಬರೆದು ಬಿಡುತ್ತಾರೆ. 'ಹತ್ತು ರೂಪಾಯಿ ಎಂಟಾಣೆ' ಬದಲಿಗೆ ಹತ್ತು ರೂಪಾಯಿ ಎಣ್ಣೆ ಎಂದು ಬರೆದು ಆಡಿಟರ್ಗಳನ್ನು ಗೊಂದಲಕ್ಕೆ ಸಿಲುಕಿಸುತ್ತಾನೆ ನಂಜ. ಪ್ರಾಸ ಪ್ರಿಯ ನಾಣಿ ಎಲ್ಲೆಂದರಲ್ಲಿ ಉದುರಿಸುವ ಚಾಟೋಕ್ತಿಗಳು ಕೂಡಾ ಸ್ವಾರಸ್ಯವಾಗಿವೆ. ಯಾರಿಗೋ ಮುಂಜಿ( ಉಪನಯನ) ಎಂದಾಗ ನಾಣಿ ಹೇಳುತ್ತಾನೆ :

ಅವನ್ಗೆ ಯಾಕೆ ಮುಂಜಿ,
ಕುಡಿಯೋಕೆ ಇಲ್ಲ ಗಂಜಿ,
ನೂಲ್ಲಿ ಹತ್ತಿ ಹಿಂಜಿ,
ಸಿಗುತ್ತೆ ಅನ್ನದ ಗಂಜಿ.

ಇದು ಒಂದು ಉದಾಹರಣೆ. ಶಾಲು ಸಾಬಿ, ಹರಿಶ್ಚಂದ್ರ ನಾಟಕ ಇವುಗಳ ಪ್ರಸಂಗ ಮರೆಯುವ ಹಾಗೆ ಇಲ್ಲ. ಜೋಡಿದಾರ್ರು ಸೀನಪ್ಪ ಮುಂತಾದವರು ಊರಲ್ಲಿ ಬಡಜನರ ಶವ ಸಂಸ್ಕಾರಕ್ಕೆ ಒಂದು ದಾರಿ ಮಾಡಿದ್ದು, ತಾವೇ ಅನೇಕ ಸಂದರ್ಭಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಸಂಬಂಧಿಸಿದ ಕ್ರಿಯೆಗಳನ್ನು ನಡೆಸಲು ಮುಂದಾದದ್ದು, ಪುರೋಹಿತರ ಹುಳಿಯನ್ನದಾಸೆಯ ಬಗ್ಗೆ ಸೀನಪ್ಪ ಸೇಡು ತೀರಿಸಿಕೊಂಡ ಪ್ರಸಂಗ, ದಾಸಯ್ಯಗಳಿಗೆ ನಕಲಿ ವಸ್ತುಗಳಿಂದ ಮಣೇವು ಹಾಕಿ ಅವರ ಸೊಕ್ಕು ಮುರಿದದ್ದು, ಊರಿಗೆ ಬರುವ ಬಸ್, ಮತ್ತದರ ಡ್ರೈವರ್, ಇಂತಹ ಅನೇಕ ಘಟನೆಗಳ ಬಗ್ಗೆ ಗೊರೂರರಷ್ಟೇ ಅತ್ಯಂತ ಸ್ವಾರಸ್ಯವಾಗಿ ಬರೆಯಬಲ್ಲರು.

ಹಳ್ಳಿಗೆ ನಾಗರಿಕ ಸಮಾಜದ ಪರಿಚಯವಾಗುವ ಸಂದರ್ಭಗಳನ್ನೂ ಜೋಡಿದಾರರ ಮಕ್ಕಳು, ಸೊಸೆ, ಗುಂಡ ಇವರ ಮೂಲಕ ಸ್ವಾರಸ್ಯಕರವಾಗಿ ಚಿತ್ರಿಸುತ್ತಾರೆ. ಪುಟ ಪುಟಗಳಲ್ಲೂ ಸ್ವಾರಸ್ಯ, ನಗೆ , ಜೀವನ ಪ್ರೀತಿ ತುಂಬಿದ ಘಟನೆಗಳ ವರ್ಣನೆ ಕೃತಿಯಲ್ಲಿ ತುಂಬಿದೆ. ಬಾಲ್ಯದಲ್ಲಿ ಅಥವಾ ಬೇರೆ ಹಂತದಲ್ಲಿ ಹಳ್ಳಿಯ ಜೀವನ ಕಂಡ ನನ್ನಂಥವರಿಗಂತೂ ಎಂದಿಗೂ ಪ್ರಿಯವಾಗುವ ಕೃತಿ. ಕಳೆದ ದಶಕಗಳ ಹಳ್ಳಿಯ ಜೀವನ ಕಾಣದವರಿಗೆ ಅದನ್ನು ಅಣುಅಣುವಾಗಿ ಮನನಮಾಡಿಕೊಡಬಲ್ಲ ಸಾರ್ಥಕ ಕೃತಿ ಇದು. ದೇಜಗೌ ಲೇಖನವೊಂದರಲ್ಲಿ ಗೊರೂರರ ಬರಹಗಳ ಬಗ್ಗೆ ಹೀಗೆ ಹೇಳುತ್ತಾರೆ. "ವಿವಿಧ ಜಾತಿಯ ಜನರನ್ನು ವರ್ಣಿಸುವಾಗ ಅವರಲ್ಲಿ ಅಂದಾಭಿಮಾನಕ್ಕಾಗಲಿ ಪೂರ್ವಗ್ರಹಕ್ಕಾಗಲಿ ಎಳ್ಳಷ್ಟು ಎಡೆ ಇಲ್ಲ. ಒಳ್ಳೆಯದನ್ನು ಕಾಣುವ ಹಿರಿತನ ಮತ್ತು ಸಜ್ಜನಿಕೆ ಅವರ ಸ್ವಭಾವವಾಗಿದೆ. ಅವರ ಯಾವ ಕೃತಿಯಲ್ಲಾದರೂ ಸರಿಯೇ, ಎಲ್ಲಿಯಾದರೂ ಸರಿಯೇ, ಗುಲ್ಲು ಗೊಂದಲಗಳಾಗಲಿ, ವೇಗ ರಭಸಗಳಾಗಲಿ, ಗುಡುಗು ಸಿಡಿಲುಗಳಾಗಲಿ ಇಲ್ಲ. ಯಾರನ್ನಾದರೂ ವಶಪಡಿಸಿಕೊಳ್ಳುವಂತಹ ಸುಕೋಮಲವಾದ ಕಾಂತ ಗುಣ ಸರ್ವತ್ರ ಪರಿಮಳಿಸುತ್ತದೆ."

ಇಂತಹ ಒಂದು ಅಮರ ಕೃತಿ ವೆಬ್ ಸೀರೀಸ್ ರೂಪದಲ್ಲಿ ಸಹಾ ಬಂದಿದ್ದು ಅದು ಈಗ ವೀಕ್ಷಣೆಗೆ ದೊರಕದಿರುವುದು ನಮ್ಮ ದೌರ್ಭಾಗ್ಯ. ●

# ಪ್ರಜಾಪ್ರಭುತ್ವದ ಒಂದು ಅಣುಕು ನೋಟ



✍ ಶಶಿಕಾಂತ ಜೋಶಿ

ನಾ ಒಂದು ಪ್ರಸಂಗ ಹೇಳಬೇಕಂತ ಮಾಡೀನಿ. ಅದು ಸರ್ವಸಾಧಾರಣ ಜನರಿಗೆ ಮಾತ್ರ. ಆದರ ಅದು ನಿಮಗಲ್ಲ. ಯಾಕೆಂದರೆ ನೀವು ಸಾಮಾನ್ಯ ಜನರಲ್ಲ. ನೀವು ಅಸಾಮಾನ್ಯರು ಮತ್ತು ದೊಡ್ಡ ಜನರು. ಯಾಕೆಂದರೆ ನಿಮಗೆ ಯಾವುದರ ಬಗ್ಗೆ ಚಿಂತೆ ಇಲ್ಲ, ಕಾಳಜೀನೂ ಇಲ್ಲ. ಮತ್ತು ಅದಕ್ಕಾಗಿ ಮಹತ್ವವನ್ನು ಕೊಡುವವರಲ್ಲ. ಈ ಪ್ರಸಂಗ ಒಂದು ಒಟ್ಟು ಕುಟುಂಬದ್ದು (ಈಗಿನ ದಿನದಾಗ ಅದು ದುರ್ಲಭ) ಅದು ಸ್ಥಿತಿವಂತ ಕುಟುಂಬದ್ದು. ಆ ಪರಿಚಯಸ್ಥ ಕುಟುಂಬದ ಮನೆಗೆ ಭೇಟಿ ಕೊಡೂವ ಭಾಗ್ಯ ಬಂತು ಆ ಕುಟುಂಬದ ಮುಖ್ಯಸ್ಥ ಒಬ್ಬ ಅಜ್ಜ. ನಾ ಅಲ್ಲಿಗೆ ಹೋದಾಗ ಎಲ್ಲರೂ ದುಃಖದಲ್ಲಿದ್ದರು. ನಾ ಅವರಿಗೆ ಕೇಳಿದೆ, ಏನಾಯಿತು ಅಥವಾ ಏನಾದರೂ ಅಮಂಗಳದ ಸುದ್ದಿ ಬಂದಿದೆಯಾ ಅಥವಾ ಯಾರಿಗಾದರೂ ಏನಾದರೂ ತೊಂದರೆ ಆಗಿದೆಯಾ ‘ಈ ಮುಸ್ಸಂಜೆ ಹೊತ್ತಲ್ಲಿ ಹೀಗೇಕೆ ಎಲ್ಲರ ಮುಖ ಇಳಿದಿದೆಯಾ ಅಂತ.

ಕುಟುಂಬದ ಮುಖ್ಯಸ್ಥ ಅಕ್ಕಾ ಅವರು ನನ್ನನ್ನು ಬರಮಾಡಿಕೊಂಡು, ಒಂದು ದೀರ್ಘಶ್ವಾಸ ತೆಗೆದುಕೊಂಡು ಹೇಳಿದರು. ನನ್ನ ಕುಟುಂಬದ ಎಲ್ಲರೂ ಹಾಕಿದ ಮತಗಳು (vote) ನಿರುಪಯೋಗಿ ಆಗಿವೆ. ಯಾರ ಮತಗಳು ಉಪಯೋಗಕ್ಕೆ ಬರಲಿಲ್ಲ ಅಂತ ಹೇಳಿದರು. ನನಗೆ ಆಶ್ಚರ್ಯವಾಯಿತು ಮತ್ತು ಕೇಳಿದೆ ಇದು ಹೇಗೆ ಅಂತ. ಇವರೆಲ್ಲರು ಹಾಕಿದ ಮತಗಳ ಅಭ್ಯರ್ಥಿ ಸೋತರಾ ಅಥವಾ ಇನ್ನೇನಾದರೂ ? ಅಂತ

ಇಲ್ಲಿ ನೋಡು ಈ ಮೊಮ್ಮಗನ ಕಡೆ ಕೈ ತೋರಿಸಿ ಹೇಳಿ (ಅವರುಯೇ ಕುಳಿತಿದ್ದ)

ಇವನ ನೋಡು, ಇ ತನ್ನ ಜೀವಕ್ಕೆ ಎಷ್ಟು ತ್ರಾಸು ತಗೊಂಡಾನಾ ಅಂತ, ಇವ ಪಕ್ಷದ ಸಭೆಗೆ ಹೋಗ್ತಾನ, ಘೋಷಣೆ ಮಾಡ್ತಾನ, ಬ್ಯಾನರ್ ಹಚ್ಯಾನ, ದಿನಾ ಹಗಲೂ ರಾತ್ರಿ ಕೆಲಸ ಮಾಡ್ಯಾನ, ಆಮೇಲೆ ಅದಕ್ಕೆ ಮತಾನು ಕೊಟ್ಟಾನ. ಇವ ಕೊಟ್ಟ ಮತದ ಪಕ್ಷದ ನಾಯಕನ engine ಅಧಿಕಾರದ station ಬಿಡ್ರಿ, ಹಳಿಮ್ಯಾಲ ಸಹ ಬರಲಿಲ್ಲ. ಇದೇ ರೀತಿ ಆ ಸಭೆ, ಈ ಸಭೆ, ಅದೇ ಜನ ಸಮೂಹ ಆಘೋಷಣೆ, ಆ Banner ಅಂತ ಕೆಲಸ ಮಾಡ್ತಾ ಇವನು ಹಾಕಿದ ಮತ 3–4 ಸಲ ವ್ಯರ್ಥ ಆಗೇದ ಅಂತ ಅಂದರು.

ಈಗ ಇನ್ನೊಬ್ಬ ಮೊಮ್ಮಗನ ಕಥೆ. ಕೇಳಿ (ಇನ್ನೊಬ್ಬ ಮೊಮ್ಮಗನ ಕಡೆ ಬೊಟ್ಟು ಮಾಡಿ ತೋರಿಸಿದರು. ಅವನು ಸಹ ಅಲ್ಲಿಯೇ ಕುಳಿತಿದ್ದ.) ಇವನ ಕಥೆಯೂ ಅದೇ ರೀತಿ ಆದ. ಅವನು ಸಹ ಆ ಸಭಾ, ಇ ಸಭಾ, Banner ಹಚ್ಚೋದು, ಘೋಷಣೆ ಮಾಡೋದು, ಆ ಚಳುವಳಿ ಈ ಸತ್ಯಾಗ್ರಹ ಅದಲ್ಲದೆ ಉಪವಾಸ ಸತ್ಯಾಗ್ರಹ ಅಂತ ಹಾರಾಡಿದ. ಅವನ ನಾಯಕನೋ ವಂಶಪಾರಂಪರದಿಂದ ಬಂದವನು, ತನ್ನ ಕತೃತ್ವ ಅಥವಾ ತನ್ನ ಪರಿಶ್ರಮದಿಂದ ಅಲ್ಲ. ಸ್ವಂತ ಕ್ಷಮತೆ ಇಲ್ಲದಿದ್ದರೆ ಏನೂ ಮಾಡಲಿಕ್ಕೆ ಆಗಲ್ಲ ಅಂತ ಅವನಿಗೂ ಇನ್ನೂ ಗೊತ್ತಾಗಿಲ್ಲ. ತನ್ನ ಕೆಲವೇ ಹೊಗಳು ಭಟ್ಟರ ಹಿಂಬಾಲಕರ ಸಹಾಯದಿಂದ ಇಡೀ ಭಾರತ ದೇಶವನ್ನು ಮೇಲಿಂದ ಕೆಳಕ್ಕೆ , ಉದ್ದ ಅಗಲಕ್ಕೂ ಕಾಲ ನಡಿಗೆಯಲ್ಲಿ ಸುತ್ತಿ ಸುತ್ತಿ ಕಾಲು ಸೋತು ಹೋದವು. ಆದರೆ ಕೈಗೆ ಏನೂ ದಕ್ಕಲಿಲ್ಲ. ಅದೇ ಗೋಲಾಕಾರದ ಕನ್ನಡಕ, ಅರ್ಧ ಪಂಜೆ, ಕೋಲಿನ ಸಹಾಯ ಪಡೆದು ವೇಶ ಹಾಕಿದರೂ ಜನ ಕೈಕೊಟ್ಟರು. ಇದರಿಂದ ಇವನದು ಸಹ ಬಹಳ ಸಲ ಹಾಕಿದ ಮತ (vote) ಉಪಯೋಗ ಆಗಲಿಲ್ಲ.

ನಾನು ಅಯ್ಯೋ ಪಾಪ ಅಂತ ಕನಿಕರ ತೋರಿಸಿದೆ ಅವರಿಬ್ಬರಿಗೂ .

ಈಗ ಇವ ನನ್ನ ಮಗ ನೋಡಿ (ಅಲ್ಲಿಯೇ ಕುಳಿತಿದ್ದ ಮಗನ ಕಡೆ ಕೈ ತೋರಿಸಿ) ಇವರ ರಾಜಕಾರಣ ಬಹಳ ತಿಳಿತದ. ಇವನ ಮನಸ್ಸು ಮತ್ತು ದೇಹ ಗಡಿಯಾರದ ಮುಳ್ಳಿನ ಹಾಂಗ ಕೆಲಸ ಮಾಡ್ತದ. ಅಂದ್ರ ಅಷ್ಟು ಪ್ರಾಮಾಣಿಕವಾಗಿ, ಸಿಸ್ತುರ್ಬದಿಂದ. ಸಭೆ ಅಂದರೆ ಸಭೆ, ಅದು ಘೋಷಣೆ, ಬ್ಯಾನರ್, ಸತ್ಯಾಗ್ರಹ ಉಪವಾಸ ಸತ್ಯಾಗ್ರಹ ಮತ್ತು ಇನ್ನೇನೋ ಇವನ ನಾಯಕ ಹೇಳಿದ ಪ್ರತಿಯೊಂದು ಕಾರ್ಯದಲ್ಲಿ ಇವ ಪೂರ್ಣ ಮನಸ್ಸಿನಿಂದ ಕೆಲಸ ಮಾಡ್ಯಾನ. ಒಂದು ಕೆಟ್ಟ ವೇಳ್ಯಾದಾಗ ಇವರಲ್ಲಿಯ ಒಬ್ಬ ನಾಯಕ ತನ್ನ ಇನ್ನೊಬ್ಬ ಹಿರಿಯ ನಾಯಕನ ಕೈಯಾಗಿನ ಗಡಿಯಾರ ತಗೊಂಡು ತನ್ನ ಕೈಯಾರ ಕಟಗೊಂಡ. ಈಗ ಇವನ ಮನಸ್ಸು ಗೊಂದಲದ ಗೂಡು. ಹೊಸ ಸಾಹೇಬನ ವೇಳೆ ಪ್ರಕಾರ ನಡೆಬೇಕೋ ಅಥವಾ ಹಳೆಯ ಸಾಹೇಬರ ಪಾಲಿಗೆ ಬಂದ ತುತ್ತುರಿ ಹಿಡಿಬೇಕೋ. ಅಂದರ ಗಡಿಯಾರದ ಪ್ರಕಾರ ಗಡಿಯಾರ ಬಿಟ್ಟು ಗಡಿಯಾರದ ಪ್ರಕಾರ ನಡೆಯಬೇಕು. ಮನಸ್ಸು ದ್ವಂದ ಯುದ್ಧದಲ್ಲಿ ಮುಳುಗಿತು. ಅಂದರೆ ಇಲ್ಲಿಯವರೆಗೆ ಮಾಡಿದ ಕೆಲಸ, ಅದರ ಅನುಭವ, ಆ ನಿಷ್ಠೆ, ಆ ತ್ಯಾಗಕ್ಕೆ ಏನೂ ಬೆಲೆನೇ ಇಲ್ಲವಾ ಅಂತ ಅನುಮಾನ ಕಾಡ್ತಾ ಅದ ಅವನಿಗೆ. ಹಿಂಗಾಗಿ ಅವನು ಹಾಕಿದ ಮತ ಸರಿಯಾಗಿ ವಿನಿಯೋಗ ಅಗಿಲ್ಲ ಅಂತ ಅವನಿಗೆ ಅನ್ನಿಸೇದ.

ನನಗೂ ಕೆಟ್ಟ ಅನಿಸ್ತು ಅವನ ಪರಿಸ್ಥಿತಿ ಬಗ್ಗೆ. ಆದರೆ ಏನೂ ಹೇಳಲಿಲ್ಲ.

ಈಗ ನನ್ನ ಸೊಸಿನ್ನ ತಗೊಳ್ರಿ. ಆಕಿ ಹೆಸರು ಅಸ್ಮಾ ಮಹಾ ಧೈರ್ಯವಂತೆ. ಬೆದ್ದದ್ದು ಪಟ್ಟು ಇದ್ದದ್ದು ಬೆತ್ತ ಮಾಡೊ ತಾಕತ್ತು ಇಕೀದು. ಅವಾಗ ಜನ ಇವರಿಗೆ ಬಾಕಿ ಸೈನಿಕರು ಅಂತ ಹೇಳಿದರು. ಅದು ಸರಿ ಇರಲಿ. ಇವರ ನಾಯಕ ಹೇಳಿದ ಮಾತೇ ವೇದ ವಾಕ್ಯ.

ನಾ ಆಕಿಗೆ ಎಷ್ಟೋ ಸಲ ಹೇಳೀನಿ ವಿಚಾರ ಮಾಡಿ ಸರಿಯಾದ ಕೆಲಸ ಮಾಡಬೇಕು ಅಂತ. ಒಮ್ಮೆ ಬಿಟ್ಟ ಬಾಣ ತಿರುಗಿ ಬರಾಂಗಿಲ್ಲ ಅಂತ. ಕಡಿಗೆ ನನ್ನ ಮಾತೇ ಖರೇ ಆತು. ಬಾಣಾನೂ ಹೋಯಿತು ಅದ್ರ ಜೊತೆಗೆ ಬಿಲ್ಲು ಹೋತು.ಬರೀ ಮಾತಾಡಿ ಉಪಯೋಗ ಇಲ್ಲ. ಕೆಲಸ ಮಾಡಿ ತೋರಿಸಬೇಕೂಂತ ತಿಳಿಲಿಲ್ಲ. ಈಗ ಬೆಂಕಿ ಇಲ್ಲದ ಮಶಾಲ ಹಿಡಕೊಂಡು ಅಡ್ಡಾಡುವ ಪರಿಸ್ಥಿತಿ ತಂದು ಕೊಂಡಾಳ. ಹಿಂಗಾಗಿ ಇವಳು ಹಾಕಿದ

ಮತ ನೀರಿನಲ್ಲೂ ಹೋಮ ಮಾಡಿದ ಹಾಂಗ ಆಗೇದ ಅಂತ ಅನಸ್ತದ ಅಂತಾಳ.

ಅವಳ ಬಗ್ಗೆ ನನಗೆ ಕನಿಕರವೇನು ಬಂತು ಆದರೆ ಈಗಲೂ ಏನೂ ಮಾತಾಡಲಿಲ್ಲ.

ಈಗ ನನ್ನ ಹೆಂಡತಿನ ತಗೊಳ್ಳಿರಿ. ಅಲ್ಲಿಯೇ ಕುಳಿತಿದ್ದ ತಮ್ಮ ಹೆಂಡತಿಗೆ ಕಡೆ ಕೈ ತೋರಿಸಿ ಹೇಳಿದರು. ಈಕಿ ಹೆಸರು ಲಕ್ಷ್ಮೀ. ಈಕೀದೆ ಅಧಿಕಾರ ಇಲ್ಲಿ. ಈಕೀಕೆ ಕಮಲ ಅಂದ್ರ ಬಹಳ ಸೇರ್ತದ. ಎಲ್ಲಲ್ರ ಮೆಚ್ಚು ಕೆಲಸ. ಇಲ್ಲಿವರೆಗೆ ಮಾಡ್ಯಾಳ.. ಮಾಡ್ತಾನು ಇದ್ದಾಳ.. ಎಲ್ಲರ ಮಾನೇನೂ ಕೇಳ್ತಾಳೆ ಆದರೆ ಮಾಡೋದು ತನ್ನ ಮನಸ್ಸಿನಾಂಗ ಇದ್ದಾಗೆ ಅದೇ ಸುಗ್ರೀವಾಜ್ಞೆ ಅಂತ ಅಂತಾಳೆ.

ಇಲ್ಲಿಯವರೆಗೆ ಸುಮ್ಮನಿದ್ದ ನಾನು ಆ ಅಜ್ಜ ಅವರಿಗೆ ಕೇಳಿದೆ. "ಹಂಗಾರ ಇವರು ಹಾಕಿದ ಮತ ಉಪ್ಯೋಗಕ್ಕೆ ಬಂತಲ್ಲ"

ಆಗ ಅಜ್ಜಾ ಹೇಳಿದರು ------> ಅವಳು ಅಷ್ಟು ಆನಂದದಿಂದ ಇಲ್ಲ, ಅಷ್ಟು ದುಃಖಾನೂ ಇಲ್ಲ. ಆದರೂ ಬಹಳ ತಳಮಳ ಆಗೇದ ಅವಳಿಗೆ. ಯಾಕಪ್ಪಾ ಅಂತ ಅಂದರ, ಅವಳಿಗೆ ಅನೇಕ ಸಲ ಯಾರ ವಿರುದ್ಧ ಮತ ಹಾಕ್ಯಾಳೋ ಅವರ ಕೈಯಾಗ ಈಗ ಕಮಲ ಬಂದದ. ಅಂದರ ಯಾರು ವಿರೋಧವರು ಇದ್ದರು ಅವರು ಈಗ ಅಧಿಕಾರಕ್ಕೆ ಬಂದಾರು. ನಾವು ಅವರು ಅಪ್ರಾಮಾಣಿಕರು, ಲಂಚಕೋರರು ಇತ್ಯಾದಿ ಘೋಷಣೆ ಕೂಗಿದ್ವಿ, ಭಾಷಣ ಮಾಡಿವೀ, ಭಾಷಣ ಕೇಳಿವೀ ಹೀಗಾಗಿ ಅವಳಿಗೆ ಅನಿಸಲಿಕ್ಕ ಹತ್ತೇದ ತಾ ಹಾಕಿದ ಮತ ದುರುಪಯೋಗ ಆಗೇದ ಅಂತ. ಹೀಂಗಾಗಿ ಇವಳ ಮತಾನು ಉಪಯೋಗಕ್ಕೆ ಬಂದಿಲ್ಲ. ನೋಡಪಾ.



ಈಗ ನಾ ಕೇಳಿದೆ "ಹಂಗಾದರ ನೀವು ಇಲ್ಲಿಯವರೆಗೆ ಹಾಕಿದ ಮತದ ಬಗ್ಗೆ ಏನು ಅಂತ ನಾನು ಒಂದು ನಿಟ್ಟುಸಿರು ಬಿಟ್ಟು ಹೇಳಿದೆ ಅದರ ಬಗ್ಗೆ ಯುವ ಪೀಳಿಗೆ ವಿಚಾರ ಮಾಡುವ ಸ್ಥಿತಿ ಬರತೊಡಗಿದೆ. ನೀವೇ ವಿಚಾರ ಮಾಡಿ ನಿರ್ಣಯಕ್ಕೆ ಬರ್ರಿ. ಅದಕ್ಕೂ ಮೊದಲು ಸ್ವಲ್ಪ ಬೇರೆ ಹೇಳ್ತಿನಿ ಕೇಳು. ಅಂತ ಅಂದರು. ಸ್ವಾತಂತ್ರದ ನಂತ್ರ ನಮ್ಮ ಭಾರತ ದೇಶ ಪ್ರಜಾಪ್ರಭುತ್ವದ ಪದ್ಧತಿ ಒಪ್ಪಿಕೊಂಡು ಅದನ್ನು ಅನುಶಾಸನಕ್ಕೆ ತಂದರು. ಪ್ರಜಾಪ್ರಭುತ್ವ ಅಂದರ ಅದು ಪ್ರಜೆಗಳಿಗೆ ಪ್ರಜೆಗಳಿಂದ ಪ್ರಜೆಗಳಿಗಾಗಿ ಎಂಬ ತತ್ವ ಎಲ್ಲರಿಗೂ ಗೊತ್ತಿರುವ ವಿಚಾರ. ಅದಕ್ಕೆ ಕೆಲವೊಂದು ನಿಯಮಗಳನ್ನು ರೂಪಿಸಿ ಆಚರಣೆಗೆ ತಂದರು. ಅದಕ್ಕೂ ಮೊದಲು ರಾಜ ಮಹಾರಾಜರ ಆಳ್ವಿಕೆಯ ಪದ್ಧತಿ ಇತ್ತು. (ಬಹುತೇಕ ವಿಶ್ವದ ಎಲ್ಲೆಲ್ಲಿಯೂ ಇತ್ತು ಅಥವಾ ಅಂದರೆ ತಪ್ಪಾಗಲಿಕ್ಕಿಲ್ಲ. ಅದಕ್ಕೆ ಮುಖ್ಯ ಕಾರಣ ಎಲ್ಲರೂ ತಿಳಿವಳಿಕೆ ಅನಕ್ಷರಸ್ಥರಿದ್ದರು. ಹೀಗಾಗಿ ಕೆಲವೇ ಜನರ ಕೈಯಲ್ಲಿ ಅಧಿಕಾರವಿದ್ದು, ಅದನ್ನು ಸಾಮದಾನ, ಬೇಧ, ನೀತಿಗಳಿಂದ ಒಡೆದು ಆಳುತ್ತಿದ್ದರು. ಯಾರಾದರೂ ಎದುರಾದರೆ ಅವರನ್ನು ಬುಡಸಮೇತ ಮುಗಿಸಿ ಬಿಡುತ್ತಿದ್ದರು. ವಂಶಪಾರಂಪರದ ಆಡಳಿತವೇ ಪ್ರಮುಖವಾಗಿತ್ತೇ ಹೊರತು, ಸಾಮರ್ಥ್ಯ ಬುದ್ಧಿ ಮತ್ತೆಗೆ ಪ್ರಾಮುಖ್ಯತೆಯೂ ಇರಲಿಲ್ಲ. ನಿರಕುಂಶ ರಾಜರುಗಳನ್ನು ಕೆಲವೇ ಬುದ್ಧಿವಂತರು, ಸಾಮಾನ್ಯ ಜನರನ್ನು ಆಳಿ ತಮ್ಮ ಬೇಳೆ ಬೇಯಿಸಿ ಕೊಳ್ಳುತ್ತಿದ್ದರು. 19ನೇ ಹಾಗೂ 20ನೇ ಶತಮಾನದ ವಿಜ್ಞಾನದ ಅವಿಷ್ಕಾರ ಅದರ ಸಂಗಡ ಕೈಗಾರಿಕಾ ಕ್ರಾಂತಿ, ಆದ ಮೇಲೆ ಸಾಮಾನ್ಯ ಜನರಿಗೆ ತಾವು ಕಲಿಯಬೇಕೆಂಬ ಹಂಬಲ ಮೂಡತೊಡಗಿತು. ಹೀಗಾಗಿ ಸ್ವಾತಂತ್ರ್ಯವಾದ ನಂತರ ನಮ್ಮ ಆಗಿನ ಕಾಲದ ಹಿರಿಯ ನಾಯಕರು ಭಾರತದ ಬಹುತೇಕ ರಾಜ, ಮಹಾರಾಜರುಗಳನ್ನು ಒಪ್ಪಿಸಿ (ಒಲ್ಲದವರನ್ನು ಒತ್ತಾಯದಿಂದ) ಅವರು ರಾಜ್ಯಗಳನ್ನು ಭಾರತ ದೇಶದಲ್ಲಿ ಒಂದುಗೂಡಿಸಿದರು ಮತ್ತು ಪ್ರಾಜಾಪ್ರಭುತ್ವದ ಆಡಳಿತವನ್ನೂ ಜಾರಿಗೆ ತಂದರು. (ಅದೇ ಸುಮಾರಿಗೆ ವಿಶ್ವದ ಬಹುತೇಕ ಎಲ್ಲೆಡೆಯೂ ಇದೇ ಪದ್ಧತಿ ಬರುತ್ತಾ ಇತ್ತು) ಸಮಾನ ವಿಚಾರಧಾರೆ ಉಳ್ಳ ಹಿರಿಯರು ಒಂದುಗೂಡಿ ಒಂದು ಗುಂಪುಕಟ್ಟಿ ಅದಕ್ಕೊಂದು ಹೆಸರು ಇಟ್ಟರು. ಆ ಗುಂಪಿಗೆ ರಾಜಕೀಯ ಪಕ್ಷ ಎಂದು ಕರೆದರು. ಪ್ರತಿಯೊಂದು ರಾಜಕೀಯ ಪಕ್ಷ ಒಂದು ಸಿದ್ಧಾಂತ, ಒಂದು ತತ್ವದ ತಳಹದಿಯ ಮೇಲೆ ನಿಂತಿದ್ದು, ಅದನ್ನು ಸಾಮಾನ್ಯ ಜರಿಗೆ ತಿಳಿಸಿ ತಮ್ಮ ಕಡೆಗೆ ಓಲಿಸಿ ಮತ ಹಾಕಿಸಿಕೊಳ್ಳುತ್ತಿದ್ದರು. ಮೊದಲು ಮೊದಲು ಸಾಮಾನ್ಯ ಜನರು ತಮ್ಮ ನಾಯಕ ಹೇಳಿದ ಹಾಗೆ ಮತ ಹಾಕುತ್ತಿದ್ದರು ( ಕಣ್ಣು ಮುಚ್ಚಿ ಅಥವಾ ವಿವೇಚನೆ ಇಲ್ಲದೆ) ಕಾಲಾಂತರದಲ್ಲಿ ಜನರು ಅಕ್ಷರಸ್ಥರಾದರು ಹಾಗೂ ತಿಳಿವಳಿಕೆ ಬರತೊಡಗಿತು. ಪ್ರಜಾಪ್ರಭುತ್ವದ ಆಡಳಿತದಲ್ಲಿ ರಾಜಕೀಯ ಪಕ್ಷಗಳಲ್ಲಿ ಲೋಪದೋಷಗಳನ್ನು ಗುರುತಿಸತೊಡಗಿದರು. ಆದರೆ ಅಷ್ಟರಲ್ಲಿಯೇ ಪ್ರಜಾಪ್ರಭುತ್ವದ ನಿಯಮಗಳನ್ನು ತಿರುಚಿ ನಮ್ಮ ಕೆಲ ನಾಯಕರು ತಮ್ಮ ಅನುಕೂಲದ ಹಾಗೆ ರಾಜಕೀಯ ದಾಳಿ ಉರುಳಿಸತೊಡಗಿದರು. ಅದರ ಹೆಸರಿನಲ್ಲಿ ಎಷ್ಟೋ ಮಂತ್ರಿಗಳನ್ನು ಮುಖ್ಯಮಂತ್ರಿಗಳನ್ನು ಉರುಳಿಸತೊಡಗಿದರು. ಅಸಮರ್ಥ ನಾಯಕರು ಮಂತ್ರಿಗಳಾದರು. ಮುಖ್ಯಮಂತ್ರಿಗಳಾದರು. ಆದರೆ ಸಾಮರ್ಥ ಉಳ್ಳ ನಾಯಕರನ್ನು

ಮೂಲೆಗುಂಪಾಗಿಸಿದರು ಅಥವಾ ನಿರಂಕುಶಗಳನ್ನಾಗಿ ಮಾಡಿದರು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಯಾವ ಪಕ್ಷದ ಸಿದ್ಧಾಂತ ತತ್ವಗಳನ್ನು ನಂಬಿ ಮತ ಹಾಕಿಸಿಕೊಂಡು ಆರಿಸಿಕೊಂಡು ಬಂದ ನಾಯಕರು ಅದೇ ಸಿದ್ಧಾಂತ, ತತ್ವಗಳನ್ನು ಗಾಳಿಗೆ ತೂರಿ ಬೇರೆ ಪಕ್ಷದ ಸಂಗಡ ಹೊಂದಾಣಿಕೆ ಮಾಡಿ ಕೊಳ್ಳತೊಡಗಿದರು. ಸಾಮಾನ್ಯ ಜನರಿಗೆ ತಾವು ಹಾಕಿದ ಮತ ಹೇಗೆ ದುರುಪಯೋಗ ವಾಗತೊಡಗಿದೆ ಅವರಿಗೆ ತಿಳಿಯ ತೊಡಗಿತು. ಕೆಲ ಬುದ್ಧಿವಂತ




ನಾಯಕರು ಪ್ರಜಾಪ್ರಭುತ್ವದ ಆಡಳಿತದ ನಿಯಮಗಳಲ್ಲಿ ಸುಧಾರಣೆಗಳನ್ನು ಸಹ ತಂದರು (NOTA, Defection law, Electronic voting ಇತ್ಯಾದಿ) ಆದರೆ ಅಧಿಕಾರದ ರುಚಿಕಂಡ ಕೆಲ ನಾಯಕರು, ಎಷ್ಟೋ ನಿಯಮಗಳನ್ನು ಬದಲಿಸಿದರೂ ಅದನ್ನು ತಿರುಚಿ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಉಪಯೋಗಿಸ ತೊಡಗಿದ್ದಾರೆ (ಅಂದರೆ ಚಾಪೆಯ ಕೆಳಗೆ ನುಸುಳಿದರೆ ರಂಗೋಲಿ ಕೆಳಗೆ ನುಸುಳಿದ ಹಾಗೆ) ಹೀಗಾಗಿ ನಾನು ಇಲ್ಲಿವರೆಗೆ ಹಾಕಿದ ಮತ್ತು ಸರಿಯಾಗಿ ಉಪಯೋಗವಾಗಿದೆಯೋ ಇಲ್ಲವೋ ಅಂತ ಕೆಲವೊಮ್ಮೆ ಅನುಮಾನ ಬರತೊಡಗಿದೆ. ಎಲ್ಲಿಯವರೆಗೆ ಪೂರ್ಣ ಸರಿಯಾದ ಪದ್ಧತಿ ಅಥವಾ ಬೇರೊಂದು ಹೊಸ ಪದ್ಧತಿ (ಅದು ಬರುವುದು ಈಗ ಅಸಾಧ್ಯವೆನಿಸತೊಡಗಿದೆ ಅದೂ ನಮ್ಮ ಕಾಲದಲ್ಲಿ) ಬರುವದಿಲ್ಲವೋ ಅಲ್ಲಿಯವರೆಗೆ ನಾವು ಒಪ್ಪಿಕೊಂಡ ಪ್ರಜಾಪ್ರಭುತ್ವದಲ್ಲಿ ಮತ ಸರಿಯಾದ ಅಭ್ಯರ್ಥಿಗೆ ಹಾಕಲೇ ಬೇಕೆಂಬುದು ನನ್ನ ಅಭಿಪ್ರಾಯ ಅಂತ ಅಂದರು.

ಸರಿಯಾದ ಅಭ್ಯರ್ಥಿಗೆ ಮತ ಹಾಕಿದರೂ ನನ್ನಂತೆ ಬಹು ಜನರು ಮತ ಹಾಕಲಿಲ್ಲವೆಂದರೆ ಅವರು ಆರಿಸಿ ಬರುವುದಿಲ್ಲ. ಹೀಗಾಗಿ ದ್ವಂದ ಪರಿಸ್ಥಿತಿ ಉದ್ಭವವಾಗಿದೆ.

ಒಳ್ಳೆಯ ಸಾಮರ್ಥ್ಯವುಳ್ಳ ನಾಯಕರು ಪ್ರಜಾಪ್ರಭುತ್ವದ ನಿಯಮಾವಳಿಗಳನ್ನು ಕಾಲಕಾಲಕ್ಕೆ ಮಾರ್ಪಾಡುಗಳನ್ನು ಮಾಡಿ, ದುರುಪಯೋಗ ಪಡಿಸಿಕೊಳ್ಳದ ಹಾಗೆ ನೋಡಿಕೊಳ್ಳಬೇಕೆಂಬುದು ನನ್ನ ಅನಿಸಿಕೆ.

ಪ್ರತಿಯೊಬ್ಬರು ಮತದಾನ ಮಾಡಲೇಬೇಕು. ಅದು ನಮ್ಮ ಮೊದಲ ಹಕ್ಕು. ಆರಿಸಿ ಬಂದ ಮೇಲೆ ಆ ಕಾಲಾವಧಿಯಲ್ಲಿ ಬೇರೆ ಪಕ್ಷಕ್ಕೆ ಹೋಗುವುದಾಗಲಿ, ಬೇರೆ ಪಕ್ಷಕ್ಕೆ ಬೆಂಬಲ ಕೊಡುವುದಾಗಲಿ, ತಮ್ಮದೆ ಗುಂಪು ಕಟ್ಟಿ ಬೇರೆ ಪಕ್ಷ ಕಟ್ಟುವದಾಗಲಿ ಅಥವಾ ಇನ್ನಾವುದೇ ರೀತಿಯ ಬೆಂಬಲ ಕೊಡುವುದಾಗಲಿ ನಿಲ್ಲಿಸಬೇಕು. ಒಂದು ವೇಳೆ ಆ ರೀತಿ ಮಾಡಿದರೆ ತಕ್ಷಣ ಅವರ ಆಯ್ಕೆಯನ್ನು ಅನುರ್ಜಿತಗೊಳಿಸಿ ಹೊಸದಾಗಿ ಆರಿಸುವ ಹಕ್ಕನ್ನೂ ಮತದಾರರಿಗೆ ಕೊಡಬೇಕು ಅಂತ ನನ್ನ ಅನಿಸಿಕೆ. ಇದರಿಂದ ಆ ಪಕ್ಷಕ್ಕೆ ಆಗಲಿ ಮತದಾರರಿಗೆ ಆಗಲಿ ಮೋಸ ಮಾಡುವುದು ತಪ್ಪುವುದು ಅಂತ ನನ್ನ ಅನಿಸಿಕೆ.

# ಅಮ್ಮ

"...ಆಗಸದೆತ್ತರದ.. ಉದಾತ್ತ ಭಾವನೆಗಳ, ಅಮ್ಮ"
ವಿಶಾಲ ಮನೋಭಾವದ ಭೂಮಿಯಂದದಿ, "ಅಮ್ಮ"
ಪವಿತ್ರ, ಪರಿಶುದ್ಧ ಗಂಗೆಯಂದದಿ, "ಅಮ್ಮ"
ತಂಪಾದ ಸುಳಿಗಾಳಿಯಂದದಿ.. ಪವನ ಪಾವನ, "ಅಮ್ಮ"
ನಂದದ ನಂದಾ ದೀಪದಂದದಿ ಅಖಂಡ ಪ್ರೀತಿಯ ಬೆಳಗುವ... "ಅಮ್ಮ"
ಪಂಚಭೂತಗಳ... ಅವಿನಾಭಾವ, ಸಂಬಂಧ
ಅನುಗಾಲವೂ, ಆವಿರ್ಭವಿಸುತ್ತಾ.. ಇರುವ
ಪ್ರಕೃತಿ ಸ್ವರೂಪಿ "ಅಮ್ಮ"
"ನಿನಗೆ ಒಂದು ದಿನದ ನೆನಪು ಸಾಕೆ??"
ನಿನ್ನ ಭಾವನೆಗಳ ಮಾರ್ದನಿ ಕೇಳದಾಯಿತೇಕೆ??
ಪ್ರತಿ ಕ್ಷಣದ ಅಣು ಅಣುವಿನ ಕಣಕಣದಲ್ಲೂ ನಿನ್ನಿರುವು ಪ್ರತಿಫಲಿಸುವುದು ತಿಳಿಯದಾಯಿತೇಕೆ??

✍ **ಸುಮನಾ**

# ಬೆಕ್ಕಿಗೆ ಗಂಟೆ

(ನೇಸರು ಕವನ ಸ್ಪರ್ಧೆಗೆ ಬಂದ ಕವನ)

✍ ಟಿ. ಎಸ್. ಶ್ರವಣ ಕುಮಾರಿ

ನನ್ನ ಐದು ವರ್ಷದ ಮಗಳು ತುಂಟಿ
ಕಲಿಯುತ್ತಿದ್ದಾಳೆ ನರ್ಸರಿಯಲ್ಲಿ ಒನ್ ಟು ಟ್ವೆಂಟಿ
ಹಗಲಿನ ಆಟಪಾಟ ಅಜ್ಜಿತಾತನ ಜೊತೆಯಲ್ಲಿ
ಸಂಜೆಯ ಮುದ್ದಾಟ ನನ್ನ ಒಡನಾಟದಲ್ಲಿ

ಈ ಸಂಜೆ –
ನಾನು ಬರುವಾಗಲೇ ಅತ್ತೆಯ ಮುಖವಾಗಿತ್ತು ದಪ್ಪ
ನೋಡು ನಿನ್ನ ಮಗಳು ಮಾಡಿರುವ ತಪ್ಪ
ತುಂಟತನ ಮಾಡಿದಾಗೆಲ್ಲ ಅವಳು ನನ್ನ ಮಗಳು
ಇಲ್ಲದಿದ್ದರೆ ಅರಳಿಸುತ್ತಾಳೆ ಎಲ್ಲರ ಮುಖದಲ್ಲಿ ಮುಗುಳು

ಹಾರುತ್ತಾ ನಲಿಯುತ್ತಾ ಬಂದಳು ಚಿಟ್ಟೆಯಂತೆ
ನೀಬಾರಮ್ಮಾ ನಾನಾಟವಾಡಿದ್ದು ನೋಡುವೆಯಂತೆ
ಹಿತ್ತಲಿನ ಜಗಲಿಯ ತುಂಬೆಲ್ಲಾ ಕುಂಡಗಳ ಉರುಳಾಟ
ಮುರಿದುಬಿದ್ದ ಗಿಡ ಎಲೆ ಹೂಗಳ ನರಳಾಟ

ಹತ್ತಿಕ್ಕಿ ಕೋಪವ ಕೇಳಿದೆ ಏನಿದು ಹುಡುಗಾಟ
ನಾನೇನು ಮಾಡಿದೆ? ಆಡಿದೆ ಸ್ಕೂಲಾಟ
ನಾ ಟೀಚರ್ರು; ಇವರೆಲ್ಲಾ ಹುಡುಗರು
ಸುಮ್ಮನೆ ಬಿಡಲಾದೀತೇ ತಪ್ಪು ಮಾಡಿದರು

ನೋಡಿವನು ಆದಿತ್ಯ – ಲೇಟಾಗಿ ಬರುತಾನೆ ನಿತ್ಯ
ಅದಲ್ಲೆ ಶಾಲೆಯಾಚೆ ಇರಲಿ ಕುಂಡವೊಂದು ಬಿದ್ದಿತ್ತು ಉರುಳಿ
ಈ ಶೃತಿಯ ಪಜೀತಿ – ಕಲಿಯುವುದಿಲ್ಲ ಪದ್ಯ ಪೂರ್ತಿ
ನಿಂತಿರಲಿ ಬೆಂಚಿನ ಮೇಲೆ – ಕುಂಡ ನಿಂತಿತ್ತು ಕಟ್ಟೆಯ ಮೇಲೆ

ಇವಳು ಚೈತ್ರ – ಯಾವ ಪ್ರಶ್ನೆಗೂ ಇಲ್ಲ ಉತ್ರ
ಬರೆಯಲಿ ಇಪ್ಪತ್ತು ಸಲ – ಕುಂಡವೊಂದು ಮೂಲೆಯಲ್ಲಿ
ಇವನು ಬರೆಯಲಿಲ್ಲ ಮಗ್ಗಿ – ಕೂತಿರಲಿ ಹೀಗೆ ಬಗ್ಗಿ
ಇವಳಿಗೆ ಬರುವುದಿಲ್ಲ ಸ್ಪೆಲ್ಲಿಂಗ್ ಅದಕ್ಕೆ ಒಂಟಿಕಾಲಲ್ಲಿ ಸ್ಟ್ಯಾಂಡಿಗ್
ಈ ಹುಡುಗರು ತಂಟೆ ಕೋರರು ಮಾಡುತ್ತಾರೆ
ಗಲಾಟೆ ಹೊಡೆಯುತ್ತಾರೆ ಹರಟೆ


ಅದಕ್ಕೇ ಒಬ್ಬೊಬ್ಬರಿಗೂ ಎರಡೇಟು ಕೊಟ್ಟೆ ಮುರಿದು ಬಿದ್ದ ಎಲೆ ಹೂವು ಕುಂಡಗಳು
ಈ ಹುಡುಗರೆಲ್ಲಾ ಜಾಣರು ಅವರಿಗೆಲ್ಲಾ ಒಂದೊಂದು ಸ್ಟಾರು
ಗಿಡದ ನೆತ್ತಿಯಲ್ಲಿ ಬಣ್ಣದ ಕಾಗದದ ಚೂರು

ನಗಬೇಕೋ ಅಳಬೇಕೋ ಈ ವರಸೆಗೆ ತಿಳಿ ಹೇಳಬೇಕು ಹೇಗೆ
ಪುಟ್ಟಿ ಈ ಗಿಡಗಳೆಲ್ಲಾ ನಿನ್ನಂತೆ ತಾನೆ ನೋವಾಗುವುದಿಲ್ಲವೆ ಅವಕ್ಕೆ
ತಟ್ಟನೆ ಒಪ್ಪಿಕೊಂಡಳು ನೀನು ಹೇಳಿದ್ದು ನಿಜವಮ್ಮ
ಟೀಚರ್ ಬೈದಾಗ ಹೊಡೆದಾಗ ನಮಗೂ ನೋವಾಗತ್ತಮ್ಮ
ಅವರಿಗೆ ಹೇಳುವವರು ಯಾರು? ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

# ಡಾ|| ಮಾರ್ಜಾಲ (The Cat with a Ph.D)

✍ ವನಜಾ ರಾಜನ್

ವೇದಾಂತಿಗಳು, ದಾರ್ಶನಿಕರು, ಬಹಳ ಹಿಂದೆಯೇ ಈ ಲೋಕವನ್ನು ಜಗತ್ತಿನ ಆಗು ಹೋಗುಗಳನ್ನು ಮಾಯೆ, ಭ್ರಮೆ ಎಂದು ಅರ್ಥೈಸಿದ್ದಾರೆ. ಅಲ್ಲವೇ? ಯಾವುದು ದಿಟ ಯಾವುದು ಖೋಟ ಗೊತ್ತಿಲ್ಲ! ಈ 'ಕಲಿ' ಕಾಲದಲ್ಲಿ ಎಡಗೈ – ಬಲಗೈಯನ್ನು ಕೂಡ ನಂಬುವಂತಿಲ್ಲ! ನೋಟುಗಳು ಖೋಟ, ಆಟ–ಪಾಠ, ಶಾಲೆ, ವಿಶ್ವವಿದ್ಯಾಲನಿಯಲಗಳು, ಪದವಿಗಳು, ಪ್ರಮಾಣ ಪತ್ರಗಳು, ಯಾವುದೂ ಸಾಚ ಅಲ್ಲ, ಸತ್ಯವಂತರು ಇಲ್ಲವೇ ಇಲ್ಲ! ನೀವೇನು ಹೇಳುತ್ತೀರಿ?




ಇದು ನಮ್ಮ ದೇಶದ ಮಟ್ಟಿಗೆ ಈ ಗೋಲ್–ಮಾಲ್' ನಡೆಯುತ್ತಿರಬಹುದೆಂಬ "ಭ್ರಮೆ"ಯಲ್ಲಿದ್ದ ನನಗೆ "ನನ್ನ" ದಿನಚರಿ ಪುಸ್ತಕದಲ್ಲಿ ಅಡಗಿ ಕುಳಿತಿದ್ದ "ಇಂಡೋನೇಶಿಯದ (Tempo) ಎಂಬ ದಿನಪತ್ರಿಕೆಯ ಒಂದು ತುಣುಕು ದೊರೆಯಿತು (2005) ಅದರ ಶೀರ್ಷಿಕೆ (The Cat with a Ph.D) ಅಲ್ಲ ಆ ಬೆಕ್ಕಿನ ಸಾಧನೆಗಳಾದರೂ ಏನು? ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಎಂಬ ಯಕ್ಷ ಪ್ರಶ್ನೆ ಎಷ್ಟು ಜನರನ್ನು ಕಾಡಿದೆ, ಲೆಕ್ಕವಿಲ್ಲ. ಹಾಗಿರುವಾಗ ಬೆಕ್ಕಿಗೆ P.hd!

ಆ ಲೇಖನ ಓದುತ್ತಾ ಓದುತ್ತಾ ಬಿಡಿ ಇದೇನು ನಮ್ಮ ದೇಶದಲ್ಲಿ ಹೊಸದೇನಲ್ಲ ಅನಿಸಿತು! ಅಲ್ಲವೇ? ತನ್ನ ಹೆಸರಿನ ಪ್ರಾರಂಭದಲ್ಲಿ "ಡಾಕ್ಟರ್" ಹಾಗೂ ಕೊನೆಯಲ್ಲಿ "Ph.D" ಅನ್ನೋದು ಸೇರಬೇಕಾದರೆ ಸತತ ಪರಿಶ್ರಮ, ವರುಷಗಳ ಅಧ್ಯಯನ, ವಿಷಯಗಳ ಅರಿವು, ಜ್ಞಾನಾರ್ಜನೆಯ ಫಲವಾಗಿ ಪಡೆದ ಆ ಪದವಿಯ ಪ್ರಧಾನ ಮಾಡಿದಾಗ ಅವರ ಹೃದಯದಲ್ಲಿ ಹೊರ ಹೊಮ್ಮುವ ಸಾರ್ಥಕತೆಯ ಭಾವನೆಗಳ ಮಹಾಪೂರ ಪದವಿ ಪಡೆದವರಿಗೇ ಗೊತ್ತು ಆ ಸುಖಾನುಭವ!

ವ್ಯಾಸಂಗ ಮಾಡದೆಯೇ ವಿಶ್ವವಿದ್ಯಾನಿಲಯದಲ್ಲಿ ಅಡಿ ಇರಿಸದೆಯೇ ಡಿಗ್ರಿಗಳು, ಡಿಪ್ಲೋಮಾಗಳು ಮಾರಾಟವಾಗುತ್ತಿದೆಯೆಂಬ ಸುದ್ದಿ ಸಮಾಚಾರಗಳು ಆಗಿಂದಾಗ್ಗೆ ಕಿವಿಗೆ ಬಂದು ಬಡಿಯುತ್ತಿರುತ್ತದೆ. ಭಯವಾಗುತ್ತದೆ!

ಪೂರ್ವಜಾವದ ಒಬ್ಬ ರೈತ ಹೊಗೆಸೊಪ್ಪು ಬೆಳೆಯುತ್ತಿದ್ದನು. ಅಮೇರಿಕದ ಒಂದು ಪ್ರತಿಷ್ಠಿತ ವಿಶ್ವವಿದ್ಯಾಲಯದ ಪದವಿ' ಎಂದು ಹೇಳಿಕೊಂಡು ತಾನು (Professor of Tobaacco Cultivation) ತನ್ನನ್ನು ತಾನೇ ಎತ್ತರದರ್ಜೆಗೆ ಏರಿಸಿಕೊಂಡನು. ಸತ್ಯದ ಸಂಗತಿ ಎಂದರೆ, ಪಕ್ಕದ ಜಕಾರ್ತ (Jakarta) ಕೂಡ ಕಂಡಿಲ್ಲ!

ಇದಕ್ಕಿಂತ ಹಾಸ್ಯಾಸ್ಪದ ಸಂಗತಿ ಎಂದರೆ ಮತ್ತೊಬ್ಬ ಹಣ ನೀಡಿ ಡಾಕ್ಟರೇಟು ಪಡೆಯಲು ಹುನ್ನಾರ ನಡೆಸಿ ಬೆಕ್ಕಿನ ಹೆಸರನ್ನು ತನ್ನ ಹೆಸರಿನ ಬದಲಾಗಿ ನಮೂದಿಸಿದನು. "ಬ್ಂದೇ ಬಂದಿತು" Ph.D ಸಂಗಡ, ಅದರ ವಿದ್ಯಾರ್ಹತೆಯ ವಿವರಗಲನ್ನೊಳಗೊಂಡ ನಕಲುಗಳು! ನಮ್ಮ ದೇಶದಲ್ಲಿ ಈ ಬಗೆಯ ವ್ಯವಹಾರಗಳು ಬೇರುಬಿಟ್ಟು ಬಹಳ ಕಾಲ ಸಂದಿದೆ. ದಿಗಿಲು ಹುಟ್ಟಿಸುತ್ತದೆ. ಈ ದಿಸೆಯಲ್ಲಿ ಸಮೂಹ ಮಾಧ್ಯಮಗಳ ಹೆಗಲ ಮೇಲೆ ಗುರುತರ ಜವಾಬ್ದಾರಿ ಇದೆ! ಯಾವುದೇ ವ್ಯಕ್ತಿಯನ್ನು ಪರಿಚಯ ಮಾಡುವಾಗ, ಅವರ ಪದವಿ ಪಟ್ಟದ ಬಗ್ಗೆ ಒತ್ತು ನೀಡಬೇಕಾಗಿಲ್ಲ! "ಬಾಯಿ ಬಿಟ್ಟರೆ ಭಂಡಗೇಡು" ಎನ್ನುವಂತೆ ಅವರ ಮಾತು ನಡೆವಳಿಕೆ, ವಿಷಯ ಜ್ಞಾನ, ಸಹಜವಾಗಿ ತಾನೇ ತಾನಾಗಿ, ನೋಡುವವರಿಗೆ, ಕೇಳುವವರಿಗೆ ಅರಿವಾಗುತ್ತದೆ ಅಲ್ಲವೇ?

# ಪರಿಸರ ಸಂರಕ್ಷಣೆಯ ಜಾಗತಿಕ ಹರಿಕಾರ ಸುಂದರ್‌ಲಾಲ್ ಬಹುಗುಣ ಮತ್ತು ವಿಶ್ವ ಪರಿಸರ ದಿನ

ಮಾನವ ಮತ್ತು ಪ್ರಕೃತಿಯ ನಡುವಿನ ಬಾಂಧವ್ಯವು ತಾಯಿ ಮತ್ತು ಮಗುವಿನ ಸಂಬಂಧದಷ್ಟೇ ಪವಿತ್ರವಾದದ್ದು. ನಾವು ಉಸಿರಾಡುವ ಗಾಳಿಯಿಂದ ಹಿಡಿದು, ಕುಡಿಯುವ ನೀರು, ತಿನ್ನುವ ಅನ್ನ ಎಲ್ಲವನ್ನೂ ಈ ಭೂಮಿ ನಮಗೆ ಉಚಿತವಾಗಿ ನೀಡಿದೆ. ಆದರೆ, ಮನುಷ್ಯ ತನ್ನ ಸ್ವಾರ್ಥ ಮತ್ತು ಅತಿಯಾದ ಆಸೆಗಳಿಗಾಗಿ ತನಗೆ ಆಶ್ರಯ ನೀಡಿದ ಪ್ರಕೃತಿಯನ್ನೇ ನಾಶಮಾಡಲು ಹೊರಟಿದ್ದಾನೆ. ಈ ಅಪಾಯವನ್ನು ಜಗತ್ತಿಗೆ ಮನವರಿಕೆ ಮಾಡಿಕೊಡಲು ಮತ್ತು ಪರಿಸರವನ್ನು ರಕ್ಷಿಸಲು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ವರ್ಷ ಜೂನ್ 5 ರಂದು ವಿಶ್ವಸಂಸ್ಥೆಯ ನೇತೃತ್ವದಲ್ಲಿ 'ವಿಶ್ವ ಪರಿಸರ ದಿನ'ವನ್ನು ಆಚರಿಸಲಾಗುತ್ತದೆ. ಈ ದಿನವನ್ನು ಆಚರಿಸುವಾಗ, ಪರಿಸರ ರಕ್ಷಣೆಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟ ಭಾರತದ ಧೀಮಂತ ಪರಿಸರ ಯೋಧ ಸುಂದರ್‌ಲಾಲ್ ಬಹುಗುಣ ಅವರ ನೆನಪು ನಮಗೆ ಬರಲೇಬೇಕು.

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲಾ ಮಾನವನ ಆಧುನಿಕ ಜೀವನಶೈಲಿ ಹೆಚ್ಚಾಯಿತು, ಆದರೆ ಇದರ ನೇರ ಪರಿಣಾಮ ಬೀರಿದ್ದು ನಮ್ಮ ಪರಿಸರದ ಮೇಲೆ. ಇಂದು ನಾವು ಎದುರಿಸುತ್ತಿರುವ ಅತಿ ದೊಡ್ಡ ಸವಾಲೆಂದರೆ ಜಾಗತಿಕ ತಾಪಮಾನ (Global Warming). ಕಾರ್ಖಾನೆಗಳು, ವಾಹನಗಳ ಹೊಗೆ ಮತ್ತು ಅರಣ್ಯಗಳ ನಾಶದಿಂದಾಗಿ ಭೂಮಿಯ ಉಷ್ಣಾಂಶ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಇದರ



ಪರಿಣಾಮವಾಗಿ ಹವಾಮಾನ ವೈಪರೀತ್ಯ ಉಂಟಾಗಿ ಅಕಾಲಿಕ ಮಳೆ, ಭೀಕರ ಬರಗಾಲ ಮತ್ತು ಚಂಡಮಾರುತಗಳು ಮರುಕಳಿಸುತ್ತಿವೆ.

ಮತ್ತೊಂದು ಜ್ವಲಂತ ಸಮಸ್ಯೆ ಎಂದರೆ ಪ್ಲಾಸ್ಟಿಕ್ ಮಾಲಿನ್ಯ. ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ ಕಸವು ಭೂಮಿಯ ಒಳಗೆ ಕರಗದೆ, ಮಣ್ಣಿನ ಫಲವತ್ತತೆಯನ್ನು ಹಾಳುಮಾಡುತ್ತಿದೆ ಮತ್ತು ಲಕ್ಷಾಂತರ ಜಲಚರಗಳ ಸಾವಿಗೆ ಕಾರಣವಾಗುತ್ತಿದೆ. ಕಾಡುಗಳನ್ನು ಕಡಿದು ಕಾಂಕ್ರೀಟ್ ನಗರಗಳನ್ನು ನಿರ್ಮಿಸುತ್ತಿರುವುದರಿಂದ ಪ್ರಕೃತಿಯ ಸಮತೋಲನ ಸಂಪೂರ್ಣವಾಗಿ ತಪ್ಪಿಹೋಗಿದೆ.

ಸಾಮಾನ್ಯವಾಗಿ ಕಾಡುಗಳನ್ನು ಕೇವಲ ಮರಮುಟ್ಟು ಅಥವಾ ಹಣ ಗಳಿಸುವ ಸಾಧನವಾಗಿ ನೋಡುವ ಕಾಲವೊಂದಿತ್ತು. ಆದರೆ ಇಂತಹ ಆಲೋಚನೆಯನ್ನು ಬದಲಾಯಿಸಿದವರು ಸುಂದರ್‌ಲಾಲ್ ಬಹುಗುಣ. ಅವರು ಜಗತ್ತಿಗೆ ಸಾರಿದ ಸತ್ಯವೇನೆಂದರೆ– "ಕಾಡಿನ ನಿಜವಾದ ಕೊಡುಗೆ ಏನು ಗೊತ್ತೇ? ಮಣ್ಣು, ನೀರು ಮತ್ತು ಶುದ್ಧ ಗಾಳಿ! ಇವೇ ನಮ್ಮ ಜೀವದ ಆಧಾರ." ಪ್ರಕೃತಿಯನ್ನು ಲೂಟಿ ಮಾಡುವುದು ಎಂದರೆ ನಮ್ಮ ಸ್ವಂತ ಭವಿಷ್ಯದ ತಳಹದಿಯನ್ನೇ ನಾವೇ ಕೊಡಲಿಯಿಂದ ಕಡಿದುಕೊಂಡಂತೆ ಎಂದು ಅವರು ದಶಕಗಳ ಹಿಂದೆಯೇ ಎಚ್ಚರಿಸಿದ್ದರು. ಹಿಮಾಲಯದಂತಹ ಸೂಕ್ಷ್ಮ ವಲಯದಲ್ಲಿ ಪರಿಸರ ಹಾನಿಯನ್ನು ಕಣ್ಣಾರೆ ಕಂಡು ಜನರನ್ನು ಜಾಗೃತಗೊಳಿಸಲು ಅವರು ಸುಮಾರು 4,800 ಕಿಲೋಮೀಟರ್‌ಗಳಿಗೂ ಹೆಚ್ಚು ದೂರ ಕಾಲ್ನಡಿಗೆಯಲ್ಲಿ ಪಾದಯಾತ್ರೆ ಮಾಡಿದ್ದರು.

1970ರ ದಶಕದಲ್ಲಿ ಉತ್ತರಾಖಂಡದ ಅಮೂಲ್ಯ ಮರಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಕಡಿಯಲು ಸರ್ಕಾರ ಮುಂದಾದಾಗ, ಸುಂದರ್‌ಲಾಲ್ ಬಹುಗುಣ ಅವರು ಗ್ರಾಮೀಣ ಮಹಿಳೆಯರನ್ನು ಸಂಘಟಿಸಿ ಹೂಡಿದ ಅಹಿಂಸಾತ್ಮಕ ಅಸ್ತ್ರವೇ 'ಚಿಪ್ಕೋ ಚಳವಳಿ'.

ಮರಗಳನ್ನು ಕಡಿಯಲು ಬಂದವರ ಮುಂದೆ ಜನರು ಮರಗಳನ್ನು ಗಟ್ಟಿಯಾಗಿ ಅಪ್ಪಿಕೊಂಡು (ಹಿಂದಿಯಲ್ಲಿ 'ಚಿಪ್ಕೋ' ಎಂದರೆ ಅಪ್ಪಿಕೋ ಎಂದರ್ಥ), "ನಮ್ಮ ದೇಹವನ್ನು ಎರಡು ತುಂಡು ಮಾಡಿ, ನಂತರವೇ ಮರಗಳನ್ನು ಮುಟ್ಟಿ" ಎಂದು ಧೀಮಂತ ಹೋರಾಟ ಮಾಡಿದರು.

ಕೊಡಲಿ ಹಿಡಿದು ಬಂದವರು ಇವರ ಪರಿಸರ ಪ್ರೇಮದ ಮುಂದೆ ತಲೆಬಾಗಬೇಕಾಯಿತು. ಈ ವಿಶಿಷ್ಟ ಹೋರಾಟದ ತೀವ್ರತೆಗೆ ಮಣಿದ ಅಂದಿನ ಸರ್ಕಾರ ಹಿಮಾಲಯದ ಕಾಡುಗಳಲ್ಲಿ ಮರ ಕಡಿಯುವುದನ್ನು ನಿಷೇಧಿಸಿತು. ಈ ಚಳವಳಿ ಇಡೀ ವಿಶ್ವಕ್ಕೇ ಪರಿಸರ ರಕ್ಷಣೆಯ ನಿಜವಾದ ಪಾಠವನ್ನು ಕಲಿಸಿಕೊಟ್ಟಿತು.

ಪರಿಸರ ಸಂರಕ್ಷಣೆ: ನಮ್ಮ ದೈನಂದಿನ ಕರ್ತವ್ಯಗಳು

ವಿಶ್ವ ಪರಿಸರ ದಿನ ಎಂದರೆ ಕೇವಲ ಜೂನ್ 5 ರಂದು ಗಿಡ ನೆಟ್ಟು, ಫೋಟೋ ತೆಗೆಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದಕ್ಕೆ ಸೀಮಿತವಾಗಬಾರದು. ಸುಂದರ್‌ಲಾಲ್ ಬಹುಗುಣ ಅವರು ತೋರಿದ ದಾರಿಯಲ್ಲಿ ನಡೆದು, ಪರಿಸರ ರಕ್ಷಣೆಯನ್ನು ನಮ್ಮ ದೈನಂದಿನ ಜೀವನದ ಭಾಗವಾಗಿಸಿಕೊಳ್ಳಬೇಕು. ಅದಕ್ಕಾಗಿ ನಾವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.



ಪ್ರತಿಯೊಬ್ಬ ನಾಗರಿಕನೂ ವರ್ಷಕ್ಕೆ ಕನಿಷ್ಠ ಒಂದು ಗಿಡವನ್ನಾದರೂ ನೆಟ್ಟು, ಅದು ಬೆಳೆಯುವವರೆಗೆ ಅದರ ಜವಾಬ್ದಾರಿ ಹೊರಬೇಕು.

ಮಾರುಕಟ್ಟೆಗೆ ಹೋಗುವಾಗ ಮನೆಯಿಂದಲೇ ಬಟ್ಟೆಯ ಚೀಲ ಕೊಂಡೊಯ್ಯುವ ಅಭ್ಯಾಸ ಮಾಡಿಕೊಳ್ಳಬೇಕು. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

ನೀರು ಮತ್ತು ವಿದ್ಯುತ್ ಅನ್ನು ಅಮೂಲ್ಯವಾದ ಸಂಪನ್ಮೂಲಗಳೆಂದು ಭಾವಿಸಿ ಮಿತವಾಗಿ ಬಳಸಬೇಕು. ನಲ್ಲಿಗಳಲ್ಲಿ ನೀರು ವೃಥಾ ಪೋಲಾಗುವುದನ್ನು ತಡೆಯಬೇಕು.

ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆಯದೆ, ಹಸಿ ಕಸ ಮತ್ತು ಒಣ ಕಸ ಎಂದು ವಿಂಗಡಿಸಿ ವಿಲೇವಾರಿ ಮಾಡಬೇಕು.

"ನಾವು ಪ್ರಕೃತಿಯನ್ನು ರಕ್ಷಿಸಿದರೆ, ಪ್ರಕೃತಿ ನಮ್ಮನ್ನು ರಕ್ಷಿಸುತ್ತದೆ" ಎಂಬ ಸತ್ಯವನ್ನು ನಾವಿನ್ನೂ ಅರಿಯದಿದ್ದರೆ ಮುಂದಿನ ಪೀಳಿಗೆಗೆ ಬದುಕಲು ಯೋಗ್ಯವಲ್ಲದ ಶೂನ್ಯ ಭೂಮಿಯನ್ನು ನೀಡಬೇಕಾಗುತ್ತದೆ. ಸುಂದರ್‌ಲಾಲ್ ಬಹುಗುಣ ಅವರಂತಹ ಮಹಾತ್ಮರು ಹಾಕಿಕೊಟ್ಟ ಪರಿಸರ ಕಾಳಜಿಯ ಹಾದಿಯೇ ಇಂದಿನ ವಿಶ್ವ ಪರಿಸರ ದಿನದ ನಿಜವಾದ ಸಂದೇಶ. ಬನ್ನಿ ಇಂದಿನಿಂದಲೇ ನಮ್ಮ ಕೈಲಾದ ಮಟ್ಟಿಗೆ ಪರಿಸರವನ್ನು ಸ್ವಚ್ಛವಾಗಿ ಮತ್ತು ಹಸಿರಾಗಿಡಲು ಪ್ರಾಮಾಣಿಕವಾಗಿ ಶ್ರಮಿಸೋಣ.

"ಪರಿಸರ ಉಳಿಸಿ, ಸುಂದರ ಭವಿಷ್ಯವನ್ನು ಬೆಳಗಿಸಿ!"

# OBITUARY




## Smt. Satýavathy Prasanna

Smt. Satýavathy and Shri HSR Prasanna had been life members of the Association for over five decades. After Shri. Prasanna's demise, Smt. Satyavathy was leading a lonely life as they had no children. She was very artistic and could produce lovely dolls and other items with waste materials. She was active in SWKC Mahila Mandal and would spend long hours correcting it's Accounts, teaching the staff, etc.

She recently passed away in Bangalore after a brief period of illness. Even in her death bed she remembered Mysore Association and donated Rupees One Lakhs for it's Centenary.

Mysore Association and Committee pays it's respects and prays that her soul attains Sadgati.




## NKES HSC Results

**Commerce Stream:**

131 appeared for the exam.

Highest Percentage: 80.5%

**Result:** 5 Distinctions, 28 First Class, 77 Second Class, 14 Pass Class.

Total Passed: 124 students

Passing Percentage: 94.65%

**Science Stream:**

55 wrote the exam.

Highest Percentage: 81.33%

Result: 1 Distinction, 9 First Class, 31 Second Class, 10 Pass Class.

Passing Percentage: 92.72%

**Arts Stream:**

16 wrote the exam.

Highest Percentage: 66.17%

Result: No Distinction, 1 First Class, 5 Second Class, 5 Pass Class.

Passing Percentage: 68.75%

---

Overall Note: Commerce 94.65% Science at 92.72%

and Arts at 68.75%.






ಅಸೋಸಿಯೇಷನ್ ವತಿಯಿಂದ ಜೂನ್ 3ರಂದು ಸಂಕಷ್ಟಿ ಚತುರ್ಥಿ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಅಸೋಸಿಯೇಷನ್‌ನ ಕಾರ್ಯದರ್ಶಿಯಾದ ಶ್ರೀ ಗಣಪತಿ ಶಂಕರಲಿಂಗ ಹಾಗೂ ಶ್ರೀಮತಿ ರೇಷ್ಮಾ ಶಂಕರಲಿಂಗ ದಂಪತಿಗಳು ಪೂಜಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.



**NOTE :** Every month Sankashti Pooja is held at Association. Those members interested to Sponsor and do the Pooja have to give their names in advance.

**Contact : *8369788157 / 99209 66497***

**As the Association is under repairs, there is no program scheduled for June 2026**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077